ಆಧುನಿಕ ಕನ್ನಡ ಕವಿತೆಗಳಲ್ಲಿ ಪೌರಾಣಿಕ ಮಹಿಳಾ ಪಾತ್ರಗಳು

ಮಾಸ್ಟರ್ ಆಫ್ ಫಿಲಾಸಫಿ (ಎಂ. ಫಿಲ್.) ಪದವಿಯ
ಆಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸಿದ ಪ್ರೌಢ ಪ್ರಬಂಧ

ಸಂಶೋಧಕರು :
ಗೀತಾ. ಕೆ. ಎನ್.

ಮಾರ್ಗದರ್ಶಕರು :
ಪ್ರೊ|| ಓ. ಎಲ್. ನಾಗಭೂಷಣಸ್ವಾಮಿ

ಭಾಷಾಂತರ ವಿಭಾಗ
ಭಾಷ ನಿಕಾಯ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ – ೫೮೩ ೨೨೧
೧೯೯೬

ಆಧುನಿಕ ಕನ್ನಡ ಕವಿತೆಗಳಲ್ಲಿ ಪೌರಾಣಿಕ ಮಹಿಳಾ ಪಾತ್ರಗಳು

ಮಾಸ್ಟರ್ ಆಫ್ ಫಿಲಾಸಫಿ (ಎಂ. ಫಿಲ್.) ಪದವಿಯ
ಆಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸಿದ ಪ್ರೌಢ ಪ್ರಬಂಧ

ಸಂಶೋಧಕರು :
ಗೀತಾ. ಕೆ. ಎಸ್.

ಮಾರ್ಗದರ್ಶಕರು :
ಪ್ರೊ|| ಓ. ಎಲ್. ನಾಗಭೂಷಣಸ್ವಾಮಿ

ಭಾಷಾಂತರ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ – ೫೮೩ ೨೨೧

೧೯೯೬

ಪ್ರಮಾಣ ಪತ್ರ

" ಆಧುನಿಕ ಕನ್ನಡ ಕವಿತೆಗಳಲ್ಲಿ ಪೌರಾಣಿಕ ಮಹಿಳಾ ಪಾತ್ರಗಳು" ಎಂಬ ಶೀರ್ಷಿಕೆಯ ಪ್ರೌಢ ಪ್ರಬಂಧವನ್ನು, ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವ ವಿದ್ಯಾಲಯಕ್ಕೆ, ಪ್ರೊ:: ಓ.ಎಲ್.ನಾಗಭೂಷಣಸ್ವಾಮಿ ಯವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲೀ ಸಲ್ಲಿಸಿರುವುದಿಲ್ಲ.

ದಿನಾಂಕ: 15.11.96

ಸ್ಥಳ : ವಿದ್ಯಾರಣ್ಯ.

ಗೀತಾ ಕೆ.ಎನ್,
ಸಂಶೋಧನಾ ವಿದ್ಯಾರ್ಥಿ,
ಭಾಷಾ ನಿಕಾಯ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ದೃಢೀಕರಣ ಪತ್ರ

ಕುಮಾರಿ ಗೀತಾ ಕೆ.ಎನ್.ರವರು ''ಆಧುನಿಕ ಕನ್ನಡ ಕವಿತೆಗಳಲ್ಲಿ ಪೌರಾಣಿಕ ಮಹಿಳಾ ಪಾತ್ರಗಳು'' ಎಂಬ ಶೀರ್ಷಿಕೆಯ ಈ ಸಂಶೋಧನ ಪ್ರೌಢ ಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಪ್ರಬಂಧವನ್ನು ಅಥವಾ ಪ್ರಬಂಧದ ಯಾವುದೇ ಭಾಗವನ್ನು ಅವರು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ.

ದಿನಾಂಕ: ೧೫.೧೧.೧೯೯೬
ಸ್ಥಳ: ಕನ್ನಡ ವಿಶ್ವವಿದ್ಯಾಲಯದ ಕಛೇರಿ
ಬೆಂಗಳೂರು

ಓ.ಎಲ್. ನಾಗಭೂಷಣ ಸ್ವಾಮಿ
ಮಾರ್ಗದರ್ಶಕರು
ಪ್ರಾಧ್ಯಾಪಕರು
ಕನ್ನಡ ಭಾಷೆ ಮತ್ತು ಸಾಹಿತ್ಯ ವಿಭಾಗ

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್., ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟ, ಮಾನ್ಯ ಕುಲಪತಿಗಳಾದ ಚಂದ್ರಶೇಖರ ಕಂಬಾರರವರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳು.

ಸಂಪ್ರಬಂಧದ ರಚನೆಗೂ, ಅದರಾಚೆಗಿನ ಕ್ಷಣಕ್ಷಣದ ಕಣಕಣದ ವಿಚಾರ ಅರಿವುಗಳಿಗೆ ಕಾರಣರಾದ,

ನನ್ನ ಪ್ರೀತಿಯ ಎಲ್ಲಾ ್ಲಾ, ್ಲಾ ್ಲಾ ್ಲಾ ್ಲಾ ್ಲಾ ಗುರುಗಳೆಲ್ಲರಿಗೂ,

ನನ್ನ ಪ್ರೀತಿಯ ಗುರು, ಮಾರ್ಗದರ್ಶಕರಾದ 'ಓ.ಎಲ್.ಎನ್.ರವರಿಗೂ ,

ಸ್ನೇಹಶೀಲ, ಹೃದಯ ಸ್ಪಂದಿಗಳಾದ ಗೀತಾಬಾಲ, ಸವಿತಾ, ಗುರು, ಕೀರ್ತಿ, ಮೀನಾಕ್ಷಿ, ಸಂಪದ, ಶಿವಪ್ಪ, ಶಿವು, ವೀಣಾ, ಪಾರ್ವತಿ, ಆಶಾ ಇವರುಗಳಿಗೂ,

ನನ್ನ ಶಾಂತ, ಉಮಣ್ಣ, ಅಮ್ಮ, ಬದರಿ, ಸಂತೋಷ, ಮನೆಯವರೆಲ್ಲರಿಗೂ

ನನ್ನ ಎಂ.ಫಿಲ್., ಅಧ್ಯಯನದ ಸಹವರ್ತಿಗಳೆಲ್ಲರಿಗೂ,,

ನನ್ನ ಪ್ರೀತಿಯ ಕನ್ನಡ ವಿಶ್ವವಿದ್ಯಾಲಯದ

ಎಲ್ಲ ್ಲ ್ಲ ್ಲ ್ಲ ್ಲ ್ಲ ್ಲ ್ಲ ್ಲ ್ಲ ್ಲ ್ಲ ್ಲ ್ಲ ್ಲ ್ಲ ್ಲ ್ಲ ರಿಗೂ,

ಕೃತಜ್ಞತಾ ಪೂರ್ವಕವಾದ, ಹೃದಯ ತುಂಬಿದ ನೆನಕೆಗಳು.

ಗೀತಾ.

ಪರಿವಿಡಿ

ಅಧ್ಯಾಯ ಒಂದು : ಪ್ರಸ್ತಾವನೆ

: ಅಧ್ಯಯನದ ಉದ್ದೇಶ ವ್ಯಾಪ್ತಿ ಸ್ವರೂಪ :

ವೈಜ್ಞಾನಿಕ ಯುಗದ ವೈಚಾರಿಕತೆಯ ಬೆಳಕಿನಲ್ಲಿ ಕಂಡ 'ವಾಸ್ತವ' ಜಗತ್ತಿನ ಚಿತ್ರಣವು ಪುರಾಣಗಳ ಪ್ರಖರತೆಯನ್ನು ಕುಂದಿಸಿದಾಗ ಪುರಾಣಗಳಲ್ಲಿ ನಂಬಿಕೆ ಕಳೆದುಕೊಂಡ ಪ್ರಜ್ಞೆಯು ಪ್ರಾಚೀನ ಕೃತಿಗಳನ್ನು ಇದ್ದ ಹಾಗೆಯೇ ಒಪ್ಪಿಕೊಳ್ಳುವುದಕ್ಕೆ ಅಸಾಧ್ಯವಾಗಿದೆ.

ಪುರಾಣ ಪಾತ್ರಗಳ ಪುನರಾವಲೋಕನ, ಆ ಪಾತ್ರಗಳನ್ನು ಇಂದಿನ ದಿನಕ್ಕೆ ಅರ್ಥೈಸಿಕೊಂಡು ಬೆಲೆಕಟ್ಟುವ ಪ್ರಯತ್ನ, ಹಳೆಯ ವಿಚಾರದ ಚೌಕಟ್ಟಿನಿಂದ 'ಪಾತ್ರ' ಗಳನ್ನು ಹೊರತಂದು ಹೊಸಪ್ರಜ್ಞೆಯಿಂದ ನೋಡುವ ಪ್ರಯತ್ನ ನಡೆಯುತ್ತಲೇ ಇದೆ.

ಸೀತೆ, ಶಕುಂತಲೆ, ಅಹಲ್ಯೆ, ದ್ರೌಪದಿ, ಕುಂತಿ, ಇತ್ಯಾದಿ ಪೌರಾಣಿಕ ಪಾತ್ರಗಳನ್ನು ತಮ್ಮ — ನಿತ್ಯಸಮಸ್ಯೆಗಳ ಸಿಕ್ಕು ಬಿಡಿಸುವ ಹಣಿಗೆಯನ್ನಾಗಿ ಮಾಡಿಕೊಳ್ಳುವುದರಿಂದ ಅವು ಇಂದಿಗೂ ಪ್ರಸ್ತುತವೆನಿಸುತ್ತವೆ. ಸಂಸ್ಕೃತಿಯನ್ನು ಅರ್ಥೈಸಿಕೊಳ್ಳಲು, ಮೌಲ್ಯೀಕರಿಸಲು ಇಂಥಹ ಪಾತ್ರ—ವಸ್ತುಗಳು 'ಒರೆಗಲ್ಲಾಗಿ ಬಳಕೆಯಾಗಿವೆ.

ಪುರಾಣಗಳ ಕಲ್ಪಿತ ಪಾತ್ರಗಳು ಇಂದಿಗೂ ಸೃಜನಶೀಲ ಮನಸ್ಸಿನ ಉಳಿಪೆಟ್ಟು ತಿನ್ನುತ್ತಲೇ ಇವೆ. ಅವುಗಳನ್ನು ತಮ್ಮ—ಪರಿಸರ, ಸಮಾಜ ಸಂಸ್ಕೃತಿ, ಸಂದರ್ಭಕ್ಕೆ ತಕ್ಕಂತೆ ಮಾರ್ಪಡಿಸುವಿಕೆಯಲ್ಲಿ ಹೇಗೆ ಭಿನ್ನಭಿನ್ನ ಹಾದಿ ಹಿಡಿದಿವೆ ಎಂಬುದನ್ನು ಅವಲೋಕಿಸುತ್ತಲೇ ಪ್ರಸ್ತುತ ಸಮಾಜದ ಪಾತ್ರಗಳ ನಿರೀಕ್ಷೆಯೂ ಹೊರಬೀಳಬಹುದು.

ಇಂಥಹ ನಿರೀಕ್ಷೆಯನ್ನಿಟ್ಟು ಕೆಲವು ಮುಖ್ಯವೆನಿಸುವ ಹಾಗೂ ಹೆಚ್ಚು ಜನರ ಮನಸ್ಸಿನಲ್ಲಿ ಕಾಡಿರುವ ಪಾತ್ರಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿಕೊಳ್ಳ ಬಯಸುತ್ತೇನೆ. ಇದಕ್ಕಾಗಿ ಅಧುನಿಕ ಕನ್ನಡ ಕವಿತೆಗಳಲ್ಲಿ ರಚನೆಯಾಗಿರುವ ಪುರಾಣದ ಸ್ತ್ರೀ ಪಾತ್ರಗಳನ್ನಷ್ಟೇ ಕೆಲವನ್ನು ಗಮನದಲ್ಲಿ ಇಟ್ಟುಕೊಂಡು ಅಧ್ಯಯನದ ಚೌಕಟ್ಟಾಗಿಸಿದ್ದೇನೆ.

. . . .

ಅಧ್ಯಾಯ ಎರಡು:

ಪುರಾಣ ಅಧ್ಯಯನದ ವಿವಿಧ ನೆಲೆಗಳು

: ‘ಪುರಾಣ’ ಎಂಬ ಪರಿಕಲ್ಪನೆಯನ್ನು ಕುರಿತು :

ಪುರಾಣ ಎಂದರೆ ಪುರಾತನವಾದದ್ದು ಎಂಬ ಅರ್ಥ ಇರುವಂತೆಯೇ ಪುರಾ+ನವ → ಪುರಾತನವಾದದ್ದೂ, ನವೀನವಾದದ್ದೂ ಎಂಬ ವ್ಯಾಖ್ಯಾನವೂ ಇದೆ. ಸಂಸ್ಕೃತದಲ್ಲಿ ಪುರಾಣಗಳನ್ನು ‘ಸ್ಮೃತಿ’ ಎಂದರೆ ಗ್ರೀಕನಲ್ಲಿ ‘ಮಿಥೋಸ’ ಎಂದಿದ್ದಾರೆ. ಇಂಗ್ಲೀಷ್ ನಲ್ಲಿ ಪುರಾಣಕ್ಕೆ ಪ್ರತಿಪದ ‘ಮಿಥ್’ ಆಗಿದೆ. ಪುರಾಣ ಎಂಬ ಪದಕ್ಕಿಂತ ಮುಖ್ಯವಾಗಿ ‘ಪುರಾಣ’ ಎಂಬ ಪರಿಕಲ್ಪನೆಯನ್ನು ಗಮನಿಸುವುದು ಮುಖ್ಯವಾದುದು. ‘ಪುರಾಣ’ ಎಂಬ ಪದ ಬಳಕೆಗೆ ಬರುವಾಗೆಲ್ಲ 18 ಪುರಾಣಗಳು ಎಂಬ ಪಂಡಿತ ವರ್ಗದ ಉಕ್ತಿಯೂ ಬರುತ್ತದೆ. ಈ ಹದಿನೆಂಟು ಪುರಾಣಗಳೆಂದರೆ ಯಾವುವು ? ಪ್ರಾಚೀನ ಸಾಹಿತ್ಯ ನಿರ್ಮಿತಿಯನ್ನು,

(1) ಪೌರುಷೇಯ (ಪುರುಷನಿರ್ಮಿತಿ)

(2) ಅಪೌರುಷೇಯ (ಪುರುಷೇತರ ನಿರ್ಮಿತಿ)

ಎಂಬ ಎರಡು ಭಾಗಗಳಿಗೆ ಒಳಪಡಿಸಲಾಗಿದ್ದು, ಅಪೌರುಷೇಯ ನಿರ್ಮಿತಿಯನ್ನು ಪುನಃ ಎರಡು ಭಾಗಗಳಾಗಿ,

(1) ಮಂತ್ರ (ಕರ್ಮಗಳ ತಂತ್ರಗಳನ್ನು ವಿವರಿಸುವುದು)

(2) ಬ್ರಾಹ್ಮಣ (ಮಂತ್ರಗಳ ಪ್ರಶಂಸೆ ಟೀಕೆ ನಿಂದೆ ಅರ್ಥವಿವರಣೆಯನ್ನು ಕೊಡುವುದು)

ಎಂದು ವಿಂಗಡಿಸಲಾಗಿದೆ. ಅಪೌರುಷೇಯ ನಿರ್ಮಿತಿ ಶೃತಿ ಪ್ರಧಾನವಾದದ್ದು. ಕರ್ಮಗಳ ತಂತ್ರಗಳನ್ನು ವಿವರಿಸುವ ‘ಮಂತ್ರದ’ ಅಡಿಯಲ್ಲಿ ಖ್ಯಾತ 4 ವೇದಗಳು ಬರುತ್ತವೆ.

(1) ಋಗವೇದ	(2) ಯಜುರವೇದ
(3) ಸಾಮವೇದ	(4) ಅಥರ್ವಣ ವೇದ

ಈ ನಾಲ್ಕು ವೇದಗಳಿಗೆ ಆರು ವೇದಾಂಗಗಳು ಸೇರಿಕೊಳ್ಳುತ್ತವೆ.

(5) ಶಿಕ್ಷಾ	(6) ವ್ಯಾಕರಣ
(7) ನಿರುಕ್ತ	(8) ಛಂದಸ್ಸು
(9) ಜ್ಯೋತಿಷ್ಯ	(10) ಅಲಂಕಾರ

ಈ ಒಟ್ಟು 10 ವೇದ — ವೇದಾಂಗಗಳಿಗೆ 4 ಉಪವೇದಗಳು ಸೇರಿಕೊಳ್ಳುತ್ತವೆ

ಅವುಗಳು (11) ಇತಿಹಾಸವೇದ (12) ಧನುರ್ವೇದ

(13) ಗಾಂಧರ್ವವೇದ. (14) ಆಯುರ್ವೇದ.

ಇಂತಹ 14 ಅಪೌರುಷೇಯ ನಿರ್ಮಿತಿಗಳಿಗೆ ಪೌರುಷೇಯ ನಿರ್ಮಿತಿಯ

4 ಭಾಗಗಳು ಸೇರಿಕೊಂಡು ಒಟ್ಟು 18 ಶಾಸ್ತ್ರಗಳಾಗುತ್ತವೆ. ಅವುಗಳೆಂದರೆ

(15) ಪುರಾಣ — ವೇದಗಳಲ್ಲಿ ಬರುವ ಸಂಗತಿಗಳನ್ನು ಕಥನರೂಪದಲ್ಲೋ ವ್ಯಾಖ್ಯಾನ ರೂಪದಲ್ಲೋ ಕೊಡುವಂತಹುಗಳು.

(16) ಆನ್ವೀಕ್ಷಿತ

(17) ಮೀಮಾಂಸೆ — ವಿಮರ್ಶೆಯನ್ನು ಒಳಗೊಂಡಿರುವಂಥದು.

(18) ಸ್ಮೃತಿ — ಶೃತಿಯ ಅರ್ಥ ಸಂಗ್ರಹ.

ಇದಿಷ್ಟು ಸ್ಥೂಲವಾದ ಪ್ರಾಚೀನ ಸಾಹಿತ್ಯ ನಿರ್ಮಿತಿಯ ವಿವರವಾಗಿದೆ. ಪೌರುಷೇಯ (ಪುರುಷ ನಿರ್ಮಿತಿ) ದಲ್ಲಿ ಬರುವ ಪುರಾಣ ಎಂಬ ರಚನೆಗೆ ವೇದಗಳಲ್ಲಿ ಬರುವ ಸಂಗತಿಗಳನ್ನು ಕಥನರೂಪದಲ್ಲೋ ವ್ಯಾಖ್ಯಾನ ರೂಪದಲ್ಲೋ ಕೊಡುವಂಥಹುಗಳು ಎಂಬ ಸ್ಥೂಲಗ್ರಹಿಕೆ ವಿದ್ವಾಂಸರಲ್ಲಿದೆ. ಮುಖ್ಯವಾದ 18 ಶಾಸ್ತ್ರಗಳೊಳಗೆ ಬರುವ 'ಪುರಾಣ' ಎಂಬ ಒಂದು ರಚನೆಯಲ್ಲೇ 18 ಪುರಾಣಗಳು ಇವೆ. ಈ ಹದಿನೆಂಟು ಪುರಾಣಗಳೂ ವ್ಯಾಸ ಕೃತವೆಂದು ಮತ್ಸ್ಯಪುರಾಣದ ಶ್ಲೋಕವೊಂದು ತಿಳಿಸುತ್ತದೆ.

ಅಷ್ಟಾದಶ ಪುರಾಣ ನಿ ಕರ್ತಾ ಸತ್ಯವತೀ ಸುತ:
ಭಾರತಾಖ್ಯಾನ ಮಖಿಲಂ ಚಕ್ರೇತದುಪಬೃಹ್ಮಣಂ

—(ಮತ್ಸ್ಯ ಪುರಾಣ, ಅಧ್ಯಾಯ 53, ಶ್ಲೋಕ 70)

ಹದಿನೆಂಟು ಪುರಾಣಗಳಲ್ಲಿ ವಿಷ್ಣುವಿಗೆ ಸಂಬಂಧಿಸಿದ ಪುರಾಣಗಳು, ಬ್ರಹ್ಮನಿಗೆ ಸಂಬಂಧಿಸಿದ ಪುರಾಣಗಳು, ಶಿವನಿಗೆ ಸಂಬಂಧಿಸಿದ ಪುರಾಣಗಳು ಇವೆ.

<u>ವಿಷ್ಣುವನ್ನು ಕುರಿತದ್ದು</u> :—

(1) ವಿಷ್ಣು ಪುರಾಣ (2) ಭಾಗವತ ಪುರಾಣ (3) ನಾರದೀಯ ಪುರಾಣ

(4) ಗರುಡ ಪುರಾಣ (5) ಪದ್ಮ ಪುರಾಣ (6) ವರಾಹ ಪುರಾಣ

<u>ಬ್ರಹ್ಮನನ್ನು ಕುರಿತದ್ದು</u> :—

(1) ಬ್ರಹ್ಮ ಪುರಾಣ (2) ಬ್ರಹ್ಮಾಂಡ ಪುರಾಣ (3) ಬ್ರಹ್ಮವೈವರ್ತ ಪುರಾಣ

(4) ಮಾರ್ಕಾಂಡೇಯ ಪುರಾಣ (5) ಭವಿಷ್ಯ ಪುರಾಣ (6) ವಾಮನ ಪುರಾಣ

<u>ಶಿವನನ್ನು ಕುರಿತದ್ದು</u> :—

(1) ವಾಯು ಪುರಾಣ (2) ಲಿಂಗ ಪುರಾಣ (3) ಸ್ಕಂದ ಪುರಾಣ

(4) ಅಗ್ನಿ ಪುರಾಣ (5) ಮತ್ಸ್ಯ ಪುರಾಣ (6) ಕೂರ್ಮ ಪುರಾಣ

ಹೀಗೆ ಒಟ್ಟು 18 ಪುರಾಣಗಳು ತ್ರಿಮೂರ್ತಿಗಳನ್ನು ಆಧರಿಸಿ, ಜಗದ ಹುಟ್ಟು ಮತ್ತು ಅದರ ಇರುವಿಕೆಗೆ ಕಾರಣಗಳನ್ನು ತಿಳಿಸುವಂಥಹವಾಗಿವೆ. ಈ ಹಿನ್ನೆಲೆಯಲ್ಲಿ ಚಂದ್ರಶೇಖರ ಕಂಬಾರರ ಮಾತೂ ಒದು ಗಮನಿಯವಾಗಿದೆ. '' ಕರ್ನಾಟಕ ರಂಗಭೂಮಿಯ ಇತಿವೃತ್ತವೆಲ್ಲ ಒಂದೆರಡು ಅಪವಾದಗಳನ್ನು ಬಿಟ್ಟರೆ ಶಿವ ಅಥವಾ ವಿಷ್ಣುವಿನ ಲೀಲೆ ಮತ್ತು ಸಂತರ ಚರಿತ್ರೆಗಳಿಂದ ತುಂಬಿದೆ'' (ಸಾಹಿತ್ಯ ಮತ್ತು ಪುರಾಣ, ಮಲ್ಲೇಪುರಂ. ಜಿ.ವೆಂಕಟೇಶ್, 1993, ಪುಟ – 116, ಉಲ್ಲೇಖಿತ). ಒಟ್ಟಾರೆಯಾಗಿ ಸಾಹಿತ್ಯದ ಮೂಲ ಸೆಲೆ ಪುರಾಣವೇ ಆಗಿದೆ ಎಂದರೆ ತಪ್ಪಿಲ್ಲ. ಈ ಎಲ್ಲಾ ಪುರಾಣಗಳಿಗೂ ಕಾಲದ ನಿರ್ದಿಷ್ಟತೆಯಿಲ್ಲವಾದರೂ, ಪ್ರಾಚೀನ ಮಾನವ ಸಂಸ್ಕೃತಿಯ ಮುಖ್ಯ ಅಂಶವಾಗಿ ಉಳಿದಿವೆ.

'' ಪುರಾಣಗಳು ಧರ್ಮದ ಸಾಂಕೇತಿಕ ನಿರೂಪಣೆಗಳು. ಪುರಾಣಗಳಲ್ಲಿ ದೇವರು, ದೇವತೆಗಳು, ಅತಿಮಾನುಷ ವ್ಯಕ್ತಿಗಳು ಏನೇನು ಮಾಡಿದರೆಂಬ ಕಥನ ಇರುತ್ತದೆ. ಅವರಿಗೆ ಒದಗಿದ ಅಸಾಮಾನ್ಯ ಸಂದರ್ಭಗಳು, ಅವರು ಪಾಲುಗೊಂಡ ಅಸಾಮಾನ್ಯ ಘಟನೆಗಳ ವಿವರಗಳು ಪುರಾಣಗಳಲ್ಲಿ ಸಿಗುತ್ತವೆ. ಈ ಸಂದರ್ಭ ಮತ್ತು ಘಟನೆಗಳು ನಡೆದ ಕಾಲ ಖಚಿತವಾಗಿ ತಿಳಿಯುವುದೇ ಇಲ್ಲ. ನಮಗೆಲ್ಲ ಪರಿಚಿತವಾದ ಕಾಲದ ಕಲ್ಪನೆಗಿಂತ ತುಂಬ ದೂರದ ಕಾಲದಲ್ಲಿ ತುಂಬ ಅಪರಿಚಿತ ಸಂದರ್ಭದಲ್ಲಿ ಪುರಾಣದ ಘಟನೆಗಳು ಆಗುತ್ತವೆ.'' (ಪುರಾಣ, 'ಓ.ಎಲ್.ನಾಗಭೂಷಣ ಸ್ವಾಮಿ, 1993, ಪುಟ 3) ಇದು ಪುರಾಣಗಳ ರಚನೆಯ ಬಗ್ಗೆ ಇರುವಿಕೆಯ ಬಗ್ಗೆ 'ಓ.ಎಲ್.ಎನ್. ರವರು ಕೊಡುವ ವಿವರಣೆ-ಇದು ಮೊದಲಿಗೆ ನಂಬಬೇಕಾದ ಒಂದು ಸತ್ಯ. ಹಾಗೆಯೇ ಇನ್ನೊಂದು ಸತ್ಯದಲ್ಲಿ ಮನುಷ್ಯನ ಸುಷುಪ್ತಿ, ಕನಸು ಎಚ್ಚರಗಳ ಅಸಾಮಾನ್ಯ ಅನುಭವ — ಕಲ್ಪನೆಗಳಾಗಿಯೋ ಅಥವಾ ವ್ಯಕ್ತಿ ವ್ಯಕ್ತಿಯ ನೆಪದಲ್ಲಿ ಸಮುದಾಯದ ಅನುಭವ — ಆಶಯಗಳ ದಾಖಲೆಗಳಾಗಿ ಪುರಾಣಗಳಿವೆ ಎಂಬುದುಹೆಚ್ಚು ಸೂಕ್ತ. ಕಾರಣ ಇಂದಿಗೂ ' ಪುರಾಣ' ವನ್ನು ಅರ್ಥೈಸುವುದು ಈ ಅರ್ಥದಲ್ಲಿಯೇ. ಒಬ್ಬರ ಮಾತುಗಳನ್ನು ಕೇಳಿ ತಾಳ್ಮೆ — ಮೀರುವಾಗ ' ಸಾಕು ಮಾಡು ನಿನ್ನ ಪುರಾಣ' ಎಂದು ರೇಗುವ ರೀತಿಯ ಮಾತು ಸಾಮಾನ್ಯ. ಇಲ್ಲಿ 'ಪುರಾಣ' ಎಂಬ ಪದ ಬಳಕೆ ಹೇಳುವವರ ಮಾತುಗಳು ಕೆಲಸಕ್ಕೆ ಬಾರದವುಗಳು ಪ್ರಯೋಜನವಿಲ್ಲದವು ಎಂಬ ಒಂದು ಅರ್ಥ ಬರುವಂತೆಯೇ, ಇನ್ನೊಂದು ಅರ್ಥದಲ್ಲಿ ' ಕೇಳುಗ' ಹೇಳುವವರ ಮಾತುಗಳನ್ನು (ಅನುಭವವನ್ನು) ಅರ್ಥೈಸಿಕೊಳ್ಳಲಾಗದಿರುವುದು, ಸಹಸ್ಪಂದಿಯಾಗಿ ಅನುಭವಕ್ಕೆ ಒಳಗೊಳ್ಳಲಾಗದಿರುವುದು ಎಂಬುದು ಸಹ ವ್ಯಕ್ತವಾಗುತ್ತವೆ. ಪುರಾಣವೆಂಬುದು ಲಂಬಿತಕಥೆಯಾಗಿ, ಒಣಹರಟೆಯಾಗಿ, ಸುಳ್ಳಿನ ಕಂತೆಯಾಗಿ, ಕಲ್ಪನೆಯ ಕಟ್ಟುಗಳಾಗಿ ಅಷ್ಟೇ ಉಳಿಯದೆ, ಕಥೆಗಳು ಬೆರಗು ಹುಟ್ಟಿಸುವ, ಗೂಢಾರ್ಥವನ್ನು ತಿಳಿಯುವಂತೆ

ಪ್ರೇರೇಪಿಸುವ , ಧಾರ್ಮಿಕ, ರಾಜಕೀಯ, ಚಾರಿತ್ರಿಕ ಹಿನ್ನೆಲೆಯನ್ನು ಶೋಧಿಸಲು ಇರುವ ಆಕರವಾಗಿ, ಭಾಷೆ, ಭಾವನೆಗಳ ಸಮರ್ಥ ಚಮತ್ಕಾರದ ಸೃಜನಶೀಲ ಸೃಷ್ಟಿಗೆ ಸಾಕ್ಷಿಗಳಾಗಿವೆ. ಪುರಾಣಗಳು ಪುರಾತನ ಮಾನವನ ಅನುಭವಗಳ ಅಭಿವ್ಯಕ್ತಿಯಾಗಿದ್ದು, ಇಂದು ಪುರಾಣಗಳನ್ನು ಅರ್ಥೈಸುವ ವ್ಯಾಖ್ಯಾನಗಳು ಅವುಗಳನ್ನು ಅರ್ಥೈಸಿಕೊಳ್ಳುವವರ ಅನುಭವವನ್ನು, ಬೌದ್ಧಿಕ ಮಟ್ಟವನ್ನು ಅವಲಂಬಿಸಿರುತ್ತವೆ. ಆದ್ದರಿಂದಲೇ ಪುರಾಣ ಕೆಲವರಿಗೆ ಶ್ರೇಷ್ಠ ಮಾನವರ (ಅತಿಮಾನುಷರ) ಜೀವನ-ಮೌಲ್ಯ, ನೀತಿಸಾರ. ಇನ್ನು ಕೆಲವರಿಗೆ ಪುರಾಣವೊಂದು ಗೊಡ್ಡು. ಮತ್ತೆ ಕೆಲವರಿಗೆ ಅವು ಚರಿತ್ರೆಯ ರಚನೆಗೆ ಸಹಾಯಕವಾಗಬಲ್ಲ ಆಕರಗಳು. ಮತ್ತಿತರರ ದೃಷ್ಟಿಯಲ್ಲಿ ಪುರಾಣವೊಂದು ಸಾಹಿತ್ಯದಂತೆ.

ಹಾಗಾದರೆ ಪುರಾಣ ಚರಿತ್ರೆಯೋ ? ಸಾಹಿತ್ಯವೋ ? ಘಟನೆಗಳ ದಾಖಲೆಯಾಗಿಯೂ ಚರಿತ್ರೆಯಾಗದೆ, ಅನುಭವದ ಅಭಿವ್ಯಕ್ತಿಯಾಗಿ ಸಾಹಿತ್ಯವಾಗದೆಯೂ, ಪುರಾಣ ತನ್ನದೇ ಆದ ಸ್ಥಾನ ಪಡೆದಿದ್ದರೂ, ಅದು ಸಾಹಿತ್ಯ ಚರಿತ್ರೆಗಳ ನಡುವೆ ಬೆರೆತು ನಿಂತಿದೆ.

ಸಾಹಿತ್ಯ ಮತ್ತು ಜಾನಪದಕ್ಕಿರುವ ಪುರಾಣ ಸಂಬಂಧ :—

ನಾರ್ಥ್ರೋಪ್ ಫ್ರೈ (Northrop Frye) ಪ್ರಕಾರ '' ಪುರಾಣವು ಸಾಹಿತ್ಯದಲ್ಲೇ ಇರುವ ರಚನಾ ವಿಧಾನದ ಒಂದು ಅಂಶ. ಯಾಕೆಂದರೆ ಒಟ್ಟಾರೆಯಾಗಿ ಸಾಹಿತ್ಯವು 'ಸ್ಥಳಾಂತರಗೊಂಡ' ಪುರಾಣ ಶಾಸ್ತ್ರ''

ಶ್ಲೆಗಲ (Schlegel) ಎಂಬಾತನ ಅಭಿಪ್ರಾಯದಲ್ಲಿ '' ಪುರಾಣಶಾಸ್ತ್ರ ಮತ್ತು ಕಾವ್ಯ ಬೇರ್ಪಡಿಸಲಾಗದ ಒಂದೇ ವಿಭಾಗ''.

ಮಾರ್ಕ್ ಶೋರರ (Mark Schorer) ಹೇಳುವಂತೆ '' ಪುರಾಣವು ಕಾವ್ಯದಿಂದ ಬೇರ್ಪಡಿಸಲಾಗದ ಉಪರಚನಾರೂಪ'' .

ರಿಚರ್ಡ್ ಚೇಸ (Richord Chase) ನಂತೆ '' ಕಾವ್ಯವು ಪುರಾಣದಿಂದ ಬೇರ್ಪಡಿಸಲಾಗದ ಉಪರಚನಾ ರೂಪ''. (ಬರಗೂರು ರಾಮಚಂದ್ರಪ್ಪ, ಸಂಸ್ಕೃತಿ ಮತ್ತು ಸೃಜನಶೀಲತೆ, 1989, [illegible])

ಹೀಗೆ ಕೆಲವು ಪಾಶ್ಚಾತ್ಯ ವಿದ್ವಾಂಸರಿಂದ ಒಕ್ಕೊರಲಿನ ಅಭಿಪ್ರಾಯ ಕೇಳಿದರೂ ಪುರಾಣ ಶಾಸ್ತ್ರದ ಸ್ಥಳಾಂತರಗೊಳ್ಳುವಿಕೆ ಅಥವಾ ಉಪರಚನಾ ರೂಪವನ್ನು ಕೆಲವರು ಜನಪದ ಕತೆ, ಲಾವಣಿಗಳಲ್ಲಿ ಬರುವ ಪುರಾಣಕ್ಕೆ ಆಧಾರವಾಗಿ ಗುರುತಿಸಿರುವುದಾಗಿದೆ. ಆದರೆ, ಜನಪದ ಕಥೆಗಳಿಗೂ ಪುರಾಣ ಕಥೆಗಳಿಗೂ ಇರುವ ಸಂಭಂಧ ಬೇರೆ ಬೇರೆ ರೀತಿಯದಾಗಿದೆ. ಸ್ಟಿತ್ ಥಾಮಸನ (Stith Thamson) ನಂತಹ ವಿದ್ವಾಂಸರು ಪುರಾಣ ಕಥೆಗಳನ್ನು ಜನಪದ ಕಥೆಗಳ ಒಂದು ಭಾಗ ಎಂದು ಗುರುತಿಸುತ್ತಾರೆ. ಜಾಫ್ರಿ ಕಿರ್ಕ್ ಸಂಥವರು '' ಅದು ಹಾಗಲ್ಲ ಜನಪದ ಕಥೆಗಳು ಪುರಾಣದ ಒಂದು ಭಾಗ'' ಅನ್ನುತ್ತಾರೆ. ಆದರೆ ಜನಪದ ಕಥೆ ಮತ್ತು ಪುರಾಣ ಕಥೆಗಳು ಮೂಲತ: ಬೇರೆಯೇ ಆಗಿವೆ. ಕಾರಣ ಜನಪದ ಕಥೆ ಸರಳವಾದ ಸಾಮಾಜಿಕ ಸ್ಥಿತಿ ಸಂದರ್ಭಗಳನ್ನು ಕುರಿತಾಗಿರುತ್ತವೆ. ಸಾಮಾನ್ಯ ಜೀವನದ ವಾಸ್ತವಕ್ಕೆ ಹತ್ತಿರವೇನೋ ಎನಿಸುವ ಆಶಯಗಳನ್ನು ಉಳ್ಳವಾಗಿರುತ್ತವೆ. ಒಂದರ ಮೇಲಿನ ಕಥೆಯೇ ಇನ್ನೊಂದೆಡೆ ಬೇರೆಯ ಕಥೆಯಾಗಿ ಮಾರ್ಪಾಡಾಗಿರುತ್ತದೆ ಎಂದರೆ ಪ್ರಾದೇಶಿಕವಾದ ಭಿನ್ನತೆಗಳು ಸ್ಪಷ್ಟವಾಗಿ ಗೋಚರಿಸುತ್ತವೆ.

ಪುರಾಣ ಕಥೆಗಳು ಜನಪದ ಕಥೆಗಳಂತೆ ಅಷ್ಟು ಸಾಮಾನ್ಯ ಎನಿಸುವುದಿಲ್ಲ. ಅವು ಇನ್ನೂ ಆಳವಾದ ಉದ್ದೇಶ ಹೊಂದಿದ್ದು, ದೈವದ ಮಟ್ಟಕ್ಕೆ ಕಲ್ಪಿತ ಚಿತ್ರಣಗಳು, ಅತ್ಯಂತ ಸಂಕೀರ್ಣವಾದ ಸಾಂಸ್ಕೃತಿಕ ಸತ್ಯ ಎನಿಸಿಕೊಂಡು, ' ಪವಿತ್ರ ' ಎಂಬ ಲಕ್ಷ್ಮಣರೇಖೆಯು ಒಳಗೆ ಉಳಿಯಲು ಪ್ರಯತ್ನಿಸುವಂತೆ ಭಾಸವಾಗುತ್ತದೆ. ಜನಪದ ಸಾಹಿತ್ಯದಲ್ಲಿನ ' ಐತಿಹ್ಯ ' ಎಂಬ ಪ್ರಕಾರ ಪುರಾಣಕ್ಕೆ ಸಮನಾದ ಆಶಯವುಳ್ಳದ್ದು. ಐತಿಹ್ಯದಲ್ಲಿನ ಹೇಳಿಕೆಗಳು ವಿಸ್ಮಯ ಪಡುವಂತೆ ಇದ್ದು, ' ಚರಿತ್ರೆ ' ಯಲ್ಲಿನ ಕೆಲವು ಅಂಶಗಳಿಗೆ ತಾಳೆಯಾಗುವುದರಿಂದ, ನಂಬಲು ಅರ್ಹವೋ ಅನರ್ಹವೋ ಎಂಬ ಗೊಂದಲ ಉಂಟಾಗುತ್ತದೆ. ಅದಕ್ಕಾಗೇ ವಾಸ್ತವದ ಹಿನ್ನೆಲೆಯಲ್ಲಿ ನೈಜವನ್ನು ಹೆಕ್ಕುವಲ್ಲಿಗೆ ಮನಸ್ಸು ಮೊದಲಾಗುತ್ತದೆ.

ಐತಿಹ್ಯಕ್ಕೆ ಪುರಾಣದಂತೆಯೇ ಕಾಲದ ನಿರ್ದಿಷ್ಟತೆಯಿಲ್ಲದೆ ಒಂದಾನೊಂದು ಕಾಲದಲ್ಲಿ ಎಂಬುದೇ ಕಾಲವಾಗಿರುತ್ತದೆ. ಆದರೆ ಐತಿಹ್ಯದ ಕಥೆಯಲ್ಲಿನ ಸಾರ — ಘಟನೆಗಳು ಹಲವು ಸತ್ಯ ಸಂಗತಿಗಳೇ ಆಗಿರಬಹುದು. ಕೆಲವು ಅಂಶಗಳು ಖಚಿತ ಇತಿಹಾಸಗಳಿಗೆ ತಾಳೆಯಾಗಲೂ ಬಹುದು. ಪುರಾಣ ಮಾತ್ರ ಇತಿಹಾಸದ ಸಂಗತಿಗಳಿಗೆ ಇಂಬುಕೊಡುವಲ್ಲಿ ವಿಫಲವಾಗುತ್ತದೆ. ಕಾರಣ ಐತಿಹ್ಯ ಜನರಲ್ಲಿ ಬಾಯಿಂದ ಬಾಯಿಗೆ ಪರಂಪರೆಯ ಮೂಲಕ ಕಥೆಯ ರೂಪದಲ್ಲಿ ಹಿಡಿದುಕೊಟ್ಟ ಚರಿತ್ರೆಯಾಗಿರುತ್ತದೆ. ಪುರಾಣ ಚರಿತ್ರೆಯ ಅಂಶಗಳನ್ನು ಹೆಕ್ಕಿಕೊಂಡಿದ್ದರೂ ವಾಸ್ತವದಿಂದ ಜಿಗಿದು ಹೊರಟಿರುತ್ತದೆ. ಪುರಾಣ — ಐತಿಹ್ಯವು ಚರಿತ್ರೆಗಿಂತ ಭಿನ್ನ. ಇದು ಜಾನಪದ ಚರಿತ್ರೆ. ಚರಿತ್ರೆಗೆ ಖಚಿತ ರೂಪವಿದೆ, ಐತಿಹ್ಯ ಜನರ ಬಾಯಲ್ಲಿರುತ್ತದೆ. ಜನಪದದಿಂದ ಸ್ಪಷ್ಟವಾಗಿ ಬೇರೆಯಾಗಿ ನಿಂತರೂ ಪುರಾಣವು

ಸಾಹಿತ್ಯದೊಂದಿಗೆ ತಳುಕು ಹಾಕಿಕೊಂಡಿದೆ. ಈ ಸಂದರ್ಭದಲ್ಲಿ ಪುರುಷೋತ್ತಮ ಬಿಳಿಮಲೆಯವರ ಅಭಿಪ್ರಾಯವನ್ನು ಗಮನಿಸಬೇಕಿದೆ. '' ವಿವರಣೆ ಮತ್ತು ವ್ಯಾಪ್ತಿಯ ದೃಷ್ಟಿಯಿಂದ ಐತಿಹ್ಯಗಳು ಪುರಾಣಕ್ಕಿಂತ ಕಿರಿದು. ಬಹುಮಟ್ಟಿಗೆ. ಅವು (ಐತಿಹ್ಯ) ಒಂದು ನಿರ್ದಿಷ್ಟ ಜಾತಿ – ಬುಡಕಟ್ಟುಗಳಿಗೆ ಬದ್ಧವಾಗಿರುತ್ತವೆ ; ಐತಿಹ್ಯಕ್ಕೆ ಯಾವುದಾದರೊಂದು ಭೌತಿಕ ಆಧಾರವಿರುತ್ತದೆ'' (ಕನ್ನಡ ಸಾಹಿತ್ಯದಲ್ಲಿ ಚರಿತ್ರೆ ಮತ್ತು ಪುರಾಣ, 1993, ಪುಟ 216, 219) ಈ ನಿಟ್ಟಿನಲ್ಲಿ ಐತಿಹ್ಯಗಳು ಬಯಸುವ ಭೌತಿಕ ಆಧಾರಗಳನ್ನು ಪುರಾಣಗಳು ಬಯಸುವುದಿಲ್ಲ. ಪುರಾಣಗಳು ಎಲ್ಲ ಬದ್ಧತೆಯನ್ನು ಮೀರಬಯಸುತ್ತಾ, ಸಾರ್ವತ್ರಿಕವಾಗುವ ದರತ್ತ ಮುಖ ಮಾಡುತ್ತವೆ. ಐತಿಹ್ಯ ಗಳಿಗಿಂತ ಪುರಾಣಗಳನ್ನು ಜನರು ಹೆಚ್ಚು ಗಂಭೀರವಾಗಿ ಸ್ವೀಕರಿಸುತ್ತಾರೆ. ಜನಪದ ಪುರಾಣಗಳು ಪ್ರಾದೇಶಿಕ ಮಟ್ಟದ ಮಹತ್ವ ಪಡೆದಿದ್ದರೆ, ಪುರಾಣವು ಇಡೀ ಸಂಸ್ಕೃತಿಯನ್ನು ಪ್ರತಿನಿಧಿ ಸುವಂತೆ ರಾಷ್ಟ್ರೀಯ ಮಟ್ಟದಲ್ಲಿ ಪ್ರಚಲಿತವಿರುತ್ತದೆ. ಭಾರತದ ಮಟ್ಟಿಗಂತೂ ಈ ವರೆಗೆ ಮುಖ್ಯದೃಷ್ಟಿಯಲ್ಲಿಟ್ಟು ನೋಡಲಾಗುತ್ತಿದ್ದ ವೈದಿಕ ಪುರಾಣಗಳೇ ಪುರಾಣ ಎನಿಸಿಕೊಂಡಿವೆ. (ಸಂಸ್ಕೃತಿ – ಉಪಸಂಸ್ಕೃತಿಗಳ ಸಂಘರ್ಷದಲ್ಲಿ ಸ್ಪಷ್ಟ ಉಳಿವನ್ನು ಸಾಧಿಸಿ, ಪ್ರತಿ ಸಂಸ್ಕೃತಿಗಳ ಮೇಲೆ ಹೇರಿದ ಸಂಸ್ಕೃತಿ ವೈದಿಕದ್ದಾಗಿರುವುದರಿಂದ) ಇದಕ್ಕೆ ಪಾಂಡಿತ್ಯಕ್ಕೆ ಕೊಟ್ಟ ಬೆಲೆಯೋ (ಭಯವೋ), ಅಕ್ಷರ ಪಡೆದ ಪ್ರಾಮುಖ್ಯವೋ ಹಿನ್ನೆಲೆಯಲ್ಲಿದೆ. ಆದರೆ ಜನಪದ ಪುರಾಣ ವೈದಿಕ ಪುರಾಣದ ಮುಂದೆ ಒಂದೇ ನೋಟಕ್ಕೆ ಗೌಣವೆನಿಸಿದರೂ, ಜನಪದರಲ್ಲಿ, ಅಂಥಾ ಸಮುದಾಯಗಳಲ್ಲಿ ಪಡೆದಿರುವ ಜನಪ್ರಿಯತೆಯ ಪದರುಗಳನ್ನು ಬಿಡಿಸುವಾಗ, ಗಳಿಸಿರುವ ಪ್ರಾಮುಖ್ಯತೆ ಒಳನೋಟಗಳಲ್ಲಿ ವ್ಯಕ್ತವಾಗುತ್ತದೆ. ವೈದಿಕ ಪುರಾಣಗಳು 'ಭಾರತೀಯ' ಎಂದು ಗುರುತಿಸಲಾಗಿರುವ ಸಂಸ್ಕೃತಿ ಮತ್ತು ಸಾಹಿತ್ಯದಾದ್ಯಂತ ಕಾಣಿಸಿಕೊಂಡಿವೆ. ಹಿಂದೂಗಳ ಪವಿತ್ರ ಧಾರ್ಮಿಕ

ಮುತ್ತು ಸಾಹಿತ್ಯದಾದ್ಯಂತ ಕಾಣಿಸಿಕೊಂಡಿವೆ. ಹಿಂದೂಗಳ ಪವಿತ್ರ ಧಾರ್ಮಿಕ ಗ್ರಂಥಗಳೆಂದು ಗುರುತಿಸಲಾಗುವ ಮಹಾಭಾರತ, ರಾಮಾಯಣಗಳು ಸಾಹಿತ್ಯದ ಸಮೃದ್ಧತೆಯನ್ನು ಪಡೆದಿವೆ. ಹಾಗೆಯೇ ಈ ಮೊದಲು ಗುರುತಿಸಿದ ಹದಿನೆಂಟು ಪುರಾಣಗಳನ್ನು ಮೀರಿದ ಪೌರಾಣಿಕ ಆಶಯ ವಸ್ತುಗಳನ್ನು ಒಳಗೊಂಡಿವೆ. ಇವು ಧಾರ್ಮಿಕ ಮಹಾಕಾವ್ಯಗಳೋ ? ಪುರಾಣಗಳೋ ? ಎರಡಕ್ಕೂ ಮಿಗಿಲಾಗಿ ಅಲ್ಲಿನ ಪಾತ್ರಗಳು, ವಸ್ತುಗಳು, ಆಶಯಗಳು ಜನ ಮನದ ಭಾಷೆಗಳಾಗಿ ಬೆಳೆದುನಿಂತಿವೆ. ವರ್ಗ, ವರ್ಣ, ಮತೀಯ ಭೇದ ವಿಲ್ಲದೆ ಈ ಕಾವ್ಯಗಳ ಸ್ಥೂಲವಾದ ಕಥೆ ಎಲ್ಲರಿಗೂ ತಿಳಿದಿರುತ್ತದೆ.

19ನೇ ಶತಮಾನದ ಹಿಂದಿನ ಸಾಹಿತ್ಯವೆಲ್ಲವೂ ಹೆಚ್ಚಾಗಿ ರಾಮಾಯಣ ಮಹಾಭಾರತವನ್ನೇ ಮೂಲವನ್ನಾಗಿ ಆಕರವನ್ನಾಗಿಸಿಕೊಂಡಿವೆ. ತಮ್ಮ ಕೃತಿಗಳಿಗೆ ವಸ್ತುವನ್ನು ಮೂಲತಃ ಅಲ್ಲಿಂದಲೇ ಹೆಕ್ಕಿಕೊಂಡಿವೆ. ವಚನಕಾರರ ಸಾಹಿತ್ಯವೊಂದು ಇದಕ್ಕೆ ಹೊರತಾದ, ಮಾತಾಗಿದೆ. ಪ್ರಸ್ತುತದಲ್ಲಿ ಈ ಗ್ರಂಥಗಳ ಧಾರ್ಮಿಕ ಮಹತ್ವ ಕುಂದಿದೆ ಎಂದು ತಿಳಿಯುವುದಾದಲ್ಲಿ ಮಹಾಭಾರತ ರಾಮಾಯಣಗಳು ಗ್ರಂಥಗಳಾಗಿಯೇ ಉಳಿಯದೆ, ಪುರಾಣಗಳ ಸಾಲಿಗೆ ಸೇರಿವೆ.

ವೈಜ್ಞಾನಿಕ ಸತ್ಯಗಳು, ವೈಚಾರಿಕ ಮನಸ್ಸುಗಳು ಪುರಾಣಗಳನ್ನು ಪವಿತ್ರವಾದವು, ಶ್ರೇಷ್ಠ ಎಂಬಂತೆ ನೋಡ ಬಯಸದೆ, ಅವುಗಳನ್ನು ಪ್ರಶ್ನಿಸುವ, ವೈಚಾರಿಕವಾಗಿ ಪ್ರಸ್ತಾಪಿಸುವ ಕ್ರಿಯೆ ಶತಮಾನಗಳಿಂದಲೂ, ಆದಿಯಿಂದಲೂ ರೂಢಿಯಾಗಿದೆ. ಇಂಥಹ ಮೊದಲ ಮಾನಸಿಕ ಕ್ರಾಂತಿ, ಪುರಾಣಗಳ ಬಗೆಗೆ ನಿರ್ಲಕ್ಷ್ಯ ಬಹಳವಾಗಿ ಕಾಣಬರುವುದು ವಚನಕಾರರಲ್ಲಿ.

ಪುರಾಣ ಮತ್ತು ಇತರ ಅಧ್ಯಯನದ ಶಿಸ್ತುಗಳಿಗೂ ಇರುವ ಸಂಬಂಧ ಸ್ವರೂಪವನ್ನು, ಪುರಾಣವನ್ನು ಅಧ್ಯಯನ ಮಾಡಲು ಬಳಕೆಯಾಗಿರುವ ಹಲವು ಪ್ರಮುಖ ದೃಷ್ಟಿ ಕೋನಗಳನ್ನು ಇನ್ನು ಮುಂದೆ ಸಂಕ್ಷಿಪ್ತವಾಗಿ ವಿವೇಚಿಸಬಹುದು.

- ಪುರಾಣ ಮತ್ತು ಚರಿತ್ರೆ.
- ಪುರಾಣವನ್ನು ಕುರಿತ ವಿಚಾರವಾದಿ ದೃಷ್ಟಿಕೋನ.
- ಮನಶಾಸ್ತ್ರ ಮತ್ತು ಪುರಾಣ.
- ಪುರಾಣವನ್ನು ಕುರಿತ ಸ್ತ್ರೀವಾದಿ ದೃಷ್ಟಿಕೋನ.
- ಮಾನವ ಶಾಸ್ತ್ರೀಯ ಮತ್ತು ಸಮಾಜ ಶಾಸ್ತ್ರೀಯ ದೃಷ್ಟಿಕೋನ.
- ಅನ್ಯೋಕ್ತಿ ದೃಷ್ಟಿಕೋನ.
- ಧಾರ್ಮಿಕ ಮತ್ತು ತಾತ್ವಿಕ ದೃಷ್ಟಿಕೋನ.

ಈ ಬಗೆಯಲ್ಲ ಹಲವು ರೀತಿಯಲ್ಲ ಅಧ್ಯಯನ ಕೈಗೊಳ್ಳಲು ಸಾಧ್ಯವಿದೆ.

<u>ಚರಿತ್ರೆ ಮತ್ತು ಪುರಾಣ</u> :-

ಚರಿತ್ರೆ ಎಂಬ ಪದಕ್ಕೆ ಇಂಗ್ಲೀಷ್ ನಲ್ಲಿ ಹಿಸ್ಟರಿ ಎಂಬ ಪದ ಬಳಕೆಯಲ್ಲಿದ್ದು ಮೂಲದಲ್ಲಿ 'ಹಿಸ್ಟೋರಿಯಾ' ಎಂಬ ಪದವಿದ್ದು, ಇದರ ಅರ್ಥ ವಿಚಾರಣೆ ಶೋಧನೆ ಎಂದಾಗಿದೆ. ಚರಿತ್ರೆಗೆ ಸಂವಾದಿಯಾಗಿ ಇತಿಹಾಸ ಎಂದೂ ಬಳಕೆಯಿದೆ. ಚರಿತ್ರೆ ಮತ್ತು ಇತಿಹಾಸ ಎಂಬವುಗಳ ನಡುವೆಯೇ ಸೂಕ್ಷ್ಮವಾದ ವ್ಯತ್ಯಾಸದೆಳೆಯಿದೆ. ಇತಿಹಾಸ, ರಾಜಕೀಯ ಶಕ್ತಿಯಿಂದ ಒಂದುಗೂಡಿದ ಒಂದು ಜನ ಸಮುದಾಯದಲ್ಲಿನ ಘಟಿತ ಘಟನೆಗಳ ದಾಖಲೆಯಾಗಿದ್ದು, ದಾಖಲಿಸುವ ವ್ಯಕ್ತಿ ತನ್ನ ಕಲ್ಪನಾಂಶಗಳನ್ನು ಉದ್ದೇಶ ಪೂರ್ವಕವಾಗಿ ಸೇರಿಸದೆ, ತನ್ನ ಅರಿವಿನ ದೃಷ್ಟಿಯಲ್ಲಿ ಕಂಡು — ಕೇಳಿದ ಘಟನೆಗಳನ್ನು ದಾಖಲೆಯಾಗಿಸಿರುವುದಾಗಿರುತ್ತದೆ. ಚರಿತ್ರೆಯಲ್ಲಿ ಒಂದು ನಾಡಿನ ಜನರೆಲ್ಲರ ಜೀವನದ ಏಳು ಬೀಳುಗಳು, ಜೀವಿತದ ಸಾಧನೆಗಳನ್ನು ಗಣಿಸದೆ ಜನ ನಾಯಕನೆಂದು ಗುರುತಿಸಿಕೊಂಡ ಒಬ್ಬ ಹೀರೋ ನ ಜೀವನ ವೃತ್ತಾಂತವನ್ನು ಅವನ ಹಿಸ್ಟೋರಿಯನ್ನು ಹೇಳುವುದಾಗಿರುತ್ತವೆ.

ಇತಿಹಾಸ ನಿರೂಪಣೆಯಲ್ಲಿ ಇತಿಹಾಸಕಾರರ ಗಮನವೆಲ್ಲಾ ಅರಸನ ಹಾಗೂ ಆಳುವ ವರ್ಗದ ಕಡೆಗೇ ಇದ್ದುದರಿಂದ, ನಾಡಿನ ವೃತ್ತಾಂತವನ್ನು ಪರಿಪೂರ್ಣವಾಗಿ ಹೇಳಲಾರದೆ ಇತಿಹಾಸವು ಒಂದು ಬಗೆಯ ಚರಿತ್ರೆಯೇ ಆಗಿದೆ. ಚರಿತ್ರೆಯಲ್ಲಿ ಒಮ್ಮೊಮ್ಮೆ, ಸಾಮಾನ್ಯ ಶೂರನೊಬ್ಬನ ಜೀವನ— ಸಾಹಸ — ಹೋರಾಟಗಳ ಗಾಥೆಯನ್ನು ಹೇಳುವ ವರ್ಣನೆಯಲ್ಲಿ ನಾಡಿನ (ಸಂಸ್ಕೃತಿ) ಚಿತ್ರಣದ ಬೆಳಕು ಹೊಳೆಯುವುದರಿಂದ ಅದು ಇತಿಹಾಸವೂ ಆಗುತ್ತದೆ. ಸಮಕಾಲೀನದಲ್ಲಿ ಇತಿಹಾಸ ಚರಿತ್ರೆ ಎರಡೂ ಒಂದೇ ಅರ್ಥ ಪಡೆದಿದೆ.

ಮುಖ್ಯವಾಗಿ ನಾವು ಇತಿಹಾಸ ಮತ್ತು ಚರಿತ್ರೆಯೊಡನೆ ಪುರಾಣ ಸಂಭಂದವನ್ನು ಪರಿಶೀಲಿಸುವುದಾದರೆ, ಭಾರತೀಯರಿಗೆ ಇತಿಹಾಸ ಎಂಬುದು

ಇಲ್ಲವಾಗಿ, ಭಾರತದ ಇತಿಹಾಸವನ್ನು ಪ್ರಾಚೀನ ಸಾಹಿತ್ಯ – ಶಾಸ್ತ್ರಗ್ರಂಥ, ಶಾಸನ, ಜಾನಪದ, ಐತಿಹ್ಯ ಇತ್ಯಾದಿಗಳಿಂದ ಅಯುಂಕಟ್ಟಬೇಕಿದೆ. ಕಾರಣ ಪ್ರಾಚೀನದಲ್ಲಿ ಭಾರತೀಯರಿಗೆ, ಪಾಶ್ಚಾತ್ಯರಿಗಿದ್ದಂತೆ ಇತಿಹಾಸದ ಬಗೆಗೆ ಕಾಳಜಿಯೇನೂ ಇರಲಿಲ್ಲ. ಜನಜೀವನವನ್ನು ಒಂದು ಧರ್ಮದಡಿಯಲ್ಲಿ, ಒಂದು ತತ್ವದಡಿಯಲ್ಲಿ ಹಿಡಿದಿಟ್ಟು ನಿರ್ದಿಷ್ಟ ಚೌಕಟ್ಟಿನಲ್ಲಿ ಜನವರ್ಗವನ್ನು ಇಟ್ಟು ಬೆಳೆಸುವ ರೂಢಿಗೆ, ವಸ್ತು ಸ್ಥಿತಿಯ ನಿಖರವಾದ ಇತಿಹಾಸ ಅರಗಿಸಿ ಕೊಳ್ಳಲಾಗದ ಅಂಶವಾಗಿ ಬಿಡುತ್ತದೆ. ಈ ಕಾರಣದಿಂದಲೇ ಇರಬಹುದು. ಇತಿಹಾಸಕ್ಕಿಂತಲೂ – ಐತಿಹ್ಯ – ಪುರಾಣ – ಸಾಹಿತ್ಯಗಳು ಅಪ್ಯಾಯಮಾನ ವಾಗಿ, ಹೇರಳವಾಗಿ ಕಾಣಸಿಗುತ್ತವೆ.

ಇದಕ್ಕೆ ಪೂರಕವಾದ ಡಾ. ಆರ್. ಶೇಷ ಶಾಸ್ತ್ರಿಯವರ ಅಭಿಪ್ರಾಯವನ್ನು ಗಮನಿಸಬಹುದು '' ಪಾಶ್ಚಾತ್ಯರ ಇತಿಹಾಸ ಕಲ್ಪನೆ, ವಾಸ್ತವ ಮತ್ತು ನಿಖರವಾದ ಅಂಕಿ ಅಂಶಗಳಿಂದ ಕೂಡಿದ್ದು ಕಲ್ಪನಾ ರಹಿತವಾಗಿದ್ದರೆ, ಭಾರತೀಯ ಇತಿಹಾಸಕಲ್ಪನೆ ಗತಿಸಿ ಹೋದ ಘಟನೆಗಳನ್ನು ಬದುಕಿ ಬಾಳಿದ ವ್ಯಕ್ತಿಗಳನ್ನು ಕೇವಲ ಘಟನೆ, ವ್ಯಕ್ತಿಗಳನ್ನಾಗಿ ನೋಡದೆ ಅವುಗಳ ಹಿಂದಿನ ಮೌಲ್ಯಗಳಾಗಿ ಗುರುತಿಸಿ, ಅವುಗಳನ್ನು, ಅವರುಗಳನ್ನು ವಸ್ತು ಸ್ಥಿತಿಗಿಂತಲೂ ಭಿನ್ನವಾದ ಸ್ತರದಲ್ಲಿರಿಸಿ, ಅದನ್ನು ಕಥಾರೂಪದಲ್ಲಿ, ಸಾಂಕೇತಿಕವಾದ ರೀತಿಯಲ್ಲಿ ಹೇಳುವ ಧೋರಣೆಯಿಂದ ಕೂಡಿದ್ದಾಗಿದೆ. ಈ ಪ್ರವೃತ್ತಿಯೇ ಹಲವಾರು ಪುರಾಣಗಳ ಸೃಷ್ಟಿಗೂ ಕಾರಣವಾಗಿರಬಹುದು."[1] ಇಂಥಹ ಪ್ರವೃತ್ತಿಯುಳ್ಳ ಭಾರತೀಯ ಮನಸ್ಸು ಕೇವಲ ನಿಖರ ಅಂಕಿಅಂಶಗಳಿಂದ ಕೂಡಿದ ಚರಿತ್ರೆಯೆಂಬ ಒಣ ಸತ್ಯವನ್ನು ಬಯಸದೆ ಕಲ್ಪನೆಯ ನೇಯ್ಗೆಯಲ್ಲಿ ಬಂದ ಪುರಾಣವನ್ನೇ ಬಯಸುತ್ತದೆ. ಅಲ್ಲದೆ ವೈಜ್ಞಾನಿಕವಾಗಿ ಪುರಾಣ ಕಾಲ್ಪನಿಕ ಎಂಬುದರ ಬಗೆಗೆ ಸ್ಪಷ್ಟತೆಯಿಲ್ಲ.

---

1. ಕನ್ನಡ ಸಾಹಿತ್ಯದಲ್ಲಿ ಚರಿತ್ರೆ ಮತ್ತು ಪುರಾಣ – ಡಾ. ಆರ್. ಶೇಷಶಾಸ್ತ್ರಿ.
   ಲೇಖನ: ಕನ್ನಡ ಶಾಸನಗಳಲ್ಲಿ ಇತಿಹಾಸ ಮತ್ತು ಪುರಾಣಪ್ರಜ್ಞೆ ಪುಟ 18–19
   ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಣೆ, ವರ್ಷ 1993.

'' ಪುರಾಣ ತಾನು ಹೇಳುತ್ತಿರುವುದು ಸತ್ಯ ಎಂದು ಸಮರ್ಥಿಸುವ ಪ್ರಯತ್ನ ಮಾಡುವುದಿಲ್ಲ. ತಾನು ಹೇಳುತ್ತಿರುವುದು ನಂಬುವಂತಿರಬೇಕು ಎಂದು ತಾರ್ಕಿಕವಾಗಿ, ವೈಚಾರಿಕವಾಗಿ ಒಪ್ಪಿಸಲು ಪ್ರಯತ್ನಿಸುವುದಿಲ್ಲ. ಪುರಾಣವು ಹೇಳುವ ಘಟನೆ ಎಷ್ಟೇ ಅದ್ಭುತವಾಗಿರಲಿ, ನಮಗೆ ಗೊತ್ತಿರುವ ಪ್ರಕೃತಿಯ ನಿಯಮಗಳಿಗೆ ವಿರೋಧವಾಗಿರಲಿ, ಪುರಾಣ ಮಾತ್ರ ಅದನ್ನು ಸುಮ್ಮನೆ ಹೇಳುತ್ತದೆ, ಸುಮ್ಮನೆ ಇರುತ್ತದೆ'' (ಬಿ.ಎಲ್.ಎನ್. ಪುರಾಣ, 1993, ಪು 3)
ಹೀಗೆ ತಾನೇ ಸತ್ಯ ಎಂದು ಸಮರ್ಥಿಸಿಕೊಳ್ಳದೆ ಸತ್ಯದ ತಲೆ ತುಳಿದಂತೆ ಪುರಾಣಗಳ ಸಂರಚನೆಯಿರುವುದರಿಂದ ಧಾರ್ಮಿಕ ಚೌಕಟ್ಟಿಗೆ ಸಿಲುಕಿಕೊಂಡ ಮನಸ್ಸಿಗೆ ಪುರಾಣವೇ ಸತ್ಯ ಅಪ್ಯಾಯ ಮಾನವಾಗುತ್ತದೆ.
ಚರಿತ್ರೆಯ ಸತ್ಯ ಕಹಿಯಾದರೂ ಮನಸ್ಸನ್ನು ಕಲಕುವ ಸತ್ಯವಾಗುವುದರಿಂದ ದೂರವೇ ಉಳಿಯುತ್ತದೆ.

ಒಟ್ಟಿನಲ್ಲಿ ಚರಿತ್ರೆ ಮತ್ತು ಪುರಾಣಕ್ಕಿರುವ ಮುಖ್ಯ ವ್ಯತ್ಯಾಸ ಹೀಗಿದೆ; ಚರಿತ್ರೆಯಲ್ಲಿನ ಘಟನೆಗಳು ನಡೆದದ್ದೆಂದೂ, ಕಾಲದ ಉಲ್ಲೇಖವಿದ್ದು ಅವು ಸತ್ಯವೆಂದು ವಿವರಿಸಲಾಗುತ್ತದೆ. ಪುರಾಣವೆಂದರೆ ಕಾಲದ ಅಸ್ಪಷ್ಟತೆಯುಳ್ಳದ್ದು, ಕಾಲ್ಪನಿಕ, ಫ್ಯಾಂಟಸಿಯ ಘಟನೆಗಳು ವಿವರಿಸಲ್ಪಟ್ಟದ್ದು, ಅದರೊಳಗೆ ಸತ್ಯ ಅಥವಾ ವಾಸ್ತವವನ್ನು ಹುಡುಕಬೇಕಾಗುತ್ತದೆ.

ಕವಿಯೊಬ್ಬರು ಹೇಳುವಂತೆ '' ಮುಂದಕ್ಕೆ ಚಲಿಸುತ್ತಿದ್ದರೆ ಅದು ಚರಿತ್ರೆ
ನಿಂತು ಮಡುಗಟ್ಟಿದರೆ ಪುರಾಣ''

(ಚರಿತ್ರೆ—ಪುರಾಣ, ಜಿ.ಎನ್.ಶಿವರುದ್ರಪ್ಪ)

ಆದರೆ ಕವಿತೆಯಂತೆ ಪುರಾಣ ಮಡುಗಟ್ಟಿನಿಲ್ಲದೆ ಕಾಲದೊಡನೆ ತಾಳಹಾಕುತ್ತಾ ಜನರೊಟ್ಟಿಗೇ ಇರುತ್ತದೆ. ಸಮಕಾಲೀನವಾದ ಎಚ್ಚರ ಇಲ್ಲದಿದ್ದರೆ,

'' ಅವರಿಸುತ್ತದೆ ನಿನ್ನನ್ನು
ಪುರಾಣದ ಪಾಚಿ
ಕೊಳೆತು ನಾಲಗೆ ಚಾಚಿ ''

(ಚರಿತ್ರೆ ಪುರಾಣ ಜಿ.ಎಸ್.ಎಸ್)

ಚರಿತ್ರೆಯ ಪ್ರವಾಹದಲ್ಲಿ ಪುರಾಣವು ಸೇರಿಹರಿಯುವುದರಿಂದ ಪ್ರಸ್ತುತವೆನಿಸುತ್ತದೆ.

ಸಾಹಿತ್ಯ ಚರಿತ್ರೆ ಪುರಾಣಗಳು ತಳುಕು ಹಾಕಿಕೊಂಡಿರುವ ಪ್ರತ್ಯೇಕ ಘಟಕಗಳು. ಸಾಹಿತ್ಯ ಗ್ರಂಥಗಳ ಉಲ್ಲೇಖದಿಂದ ಚರಿತ್ರೆ ಮತ್ತು ಪುರಾಣದ ಸ್ಪಷ್ಟವಾದ ಅರ್ಥವನ್ನು ಗ್ರಹಿಸಬಹುದು. 'ಶ್ರೀ ಹರಿಚರಿತ' 'ರಾಮಧಾನ್ಯಚರಿತ' 'ಯಶೋಧರಚರಿತ' 'ಹರ್ಷಚರಿತ', ಹೀಗೆ 'ಚರಿತವೆಂದು' ಬರೆಯಲ್ಪಟ್ಟ ಕೃತಿಗಳು ಇತಿಹಾಸವೇ ಆಗದೆ ಇತಿಹಾಸದ ಆಕರಗಳಾಗುತ್ತವೆ. ಈ ಚರಿತ್ರೆಯಲ್ಲಿ ಪೌರಾಣಿಕತೆಯು ಸೇರಿರುತ್ತದೆ. 'ಚಾವುಂಡರಾಯ ಪುರಾಣ' 'ಆದಿಪುರಾಣ' 'ಬಸವ ಪುರಾಣ' ಮೊದಲಾದ ಪುರಾಣ 'ಪುರಾಣ' ಎಂದು ಹೆಸರಿಸಿಕೊಂಡ ಕೃತಿಗಳು ಪೂರ್ಣವಾಗಿ ಕಾಲ್ಪನಿಕವಾಗಿರದೆ ನಿರ್ದಿಷ್ಟ ವ್ಯಕ್ತಿಯ ವೃತ್ತಾಂತಗಳಾಗಿರುತ್ತವೆ.

ಒಂದು ಸೆಕೆಂಡಿನ ಹಿಂದಿನ ಕ್ಷಣ 'ಭೂತಕ್ಕೆ' ಸೇರಿದಂತೆ, ಒಂದಷ್ಟು ವರ್ಷಗಳ ಹಿಂದಿನ ಘಟನೆಗಳು 'ಚರಿತ್ರೆ' ಯಾದಂತೆ ಹಲವು ಕಾಲದ ಹಿಂದಿನ ಘಳಿಗೆಗಳೂ, ಘಟನೆಗಳೂ ಪುರಾಣವಾಗಿ ಮಾರ್ಪಾಡಾಗ ಬಹುದು. ನಮ್ಮೊಂದಿಗೆ ಜೀವಿಸುವ ವ್ಯಕ್ತಿಗಳು 'ಲೆಜೆಂಡ್' ಆಗುವಪ್ರಕ್ರಿಯೆ ಈ ಬಗೆಯದು.

<u>ಮನಶಾಸ್ತ್ರ ಮತ್ತು ಪುರಾಣ</u> :-

19ನೇ ಶತಮಾನದಲ್ಲಿ ದಟ್ಟವಾಗಿ ಕಾಣಿಸಿಕೊಂಡ ಮನಶಾಸ್ತ್ರದ ಅಧ್ಯಯನವು ತನ್ನ ಹಲವಾರು ವ್ಯಾಖ್ಯಾನಗಳನ್ನು ನೀಡುವಾಗ ಪುರಾಣವನ್ನು ಒಂದು ತುತ್ತಾಗಿ ಬಳಸಿಕೊಂಡಿತು. ಮನುಷ್ಯನ ಮನಸ್ಸಿನ ಹಿನ್ನೆಲೆಯಲ್ಲಿ ಪುರಾಣವನ್ನು ವ್ಯಾಖ್ಯಾನಿಸ ಹೊರಟ ಆಧುನಿಕ ಮನೋ ವಿಶ್ಲೇಷಕರಲ್ಲಿ ಸಿಗ್ಮಂಡ ಫ್ರಾಯ್ಡ್ ಮುಖ್ಯನಾದವನು. 'ಪುರಾಣಗಳೆಂದರೆ ಇಡೀ ಜನಾಂಗದ ವಿಕ್ಷಿಪ್ತ ಕನಸುಗಳು.' ಸಾಹಿತ್ಯಾದಿ ಕಲೆಗಳು ಕೂಡ ಕನಸಿನ ಹಾಗೆ ವ್ಯಕ್ತಿಗಳ ಚಿತ್ತದಲ್ಲಿ ಅದುಮಿಟ್ಟ ಆಕಾಂಕ್ಷೆಗಳು ತೃಪ್ತಿಗೊಳ್ಳುವ ಒಂದು ವಿಧಾನ. 'ಕನಸು ಮತ್ತು ಪುರಾಣಗಳ ಸಾರವೇನಿದ್ದರೂ ಅಸ್ವಸ್ಥ ಮನಸ್ಸಿನ ಅತೃಪ್ತ ಆಕಾಂಕ್ಷೆಗಳ ಕುರುಹು. ಹೀಗೆ ಫ್ರಾಯ್ಡ್ ಪುರಾಣ — ಕನಸು — ಕಲೆಗಳನ್ನು ವ್ಯಾಖ್ಯಾನಿಸಿದ್ದನ್ನು ಪರಿಪೂರ್ಣವಾಗಿ ಒಪ್ಪಿಕೊಳ್ಳಲಾಗಲಿಲ್ಲ, ಒಪ್ಪಿಕೊಳ್ಳಲು ಆಗುವುದೂಯಿಲ್ಲ.

ಮನುಷ್ಯನ ಮನಸ್ಸು ಅದುಮಿಟ್ಟ ಆಸೆಗಳ ವ್ಯಕ್ತರೂಪವಾಗಿ ಪುರಾಣಗಳಿವೆ ಎನ್ನುವ ಧೋರಣೆಗೆ ವ್ಯತಿರಿಕ್ತವಾಗಿ ಮತ್ತೊಬ್ಬ ಆಧುನಿಕ ಮನಶಾಸ್ತ್ರಜ್ಞ ಕಾರ್ಲಯೂಂಗ ಪುರಾಣಗಳನ್ನು ಸೃಜನಶೀಲ ಅಂಶವಾಗಿ ಕಾಣುತ್ತಾನೆ. 'ಪುರಾಣವು ಕನಸಿನ ಹಾಗೆಯೇ ಸರಿ. ಆದರೆ ಯಾರೂ ಸಹ ತಮಗಿಷ್ಟಬಂದಂತೆ ಚಾಕಚಕ್ಯತೆಯಿಂದ ಕ್ರಮಬದ್ಧವಾದ ಕನಸು ಕಾಣುವುದು ಸಾಧ್ಯವಿಲ್ಲವಷ್ಟೆ ? ಹಾಗೆಯೇ ಸುಸಂಬದ್ಧವಾಗಿಯೂ ಸ್ಫುಟವಾಗಿಯೂ ಪುರಾಣಗಳನ್ನು ನಿರ್ಮಿಸುವುದು ಸಾಧ್ಯವಿಲ್ಲ. ಕೆಲವು ಕನಸುಗಳು ಇತರ ಹಲವು ಕನಸುಗಳಿಗಿಂತ ಅರ್ಥಪೂರ್ಣವಾಗಿರುತ್ತವೆ; ಪುರಾಣಗಳಲ್ಲಿಯೂ ಹಾಗೆಯೇ ಕೆಲವು ತುಂಬ ಅರ್ಥಗರ್ಭಿತವಾಗಿರುತ್ತವೆ. ಇಂಥ ಸಂಗತಿಗಳನ್ನು ಅನುಲಕ್ಷಿಸಿದಾಗ ಕೆಲವೊಮ್ಮೆಯಾದರೂ

ಸುಪ್ತಚಿತ್ತವು ಜಾಗೃತ ಚಿತ್ತದ ಚಿಂತನೆಗಿಂತ ಉನ್ನತವೂ ಆಳವೂ ಆದ 'ಕಾಣ್ಕೆ' ಯನ್ನು ಕಾಣುವುದು ಸಾಧ್ಯವೆಂದು ಒಪ್ಪಿಕೊಳ್ಳಬಯಸುತ್ತಾನೆ. (ಡಾ. ಕೆ. ಎಲ್. ಗೋಪಾಲ ಕೃಷ್ಣಯ್ಯ, ಸಾಹಿತ್ಯಸಂವಾದ, 1993, ಪುಟ 7, 14, 13, ಉಲ್ಲೇಖಿತ) 'ಒಪ್ಪಿಕೊಳ್ಳುವುದರ' ಅರ್ಥ ಫ್ರಾಯ್ಡ್‌ನ ಅಭಿಪ್ರಾಯವಾದ ಅಸ್ವಸ್ಥ ಮನಸ್ಸಿನ, ಅತೃಪ್ತ ಆಕಾಂಕ್ಷೆಗಳ ಕುರುಹಾಗಿ ಪುರಾಣ — ಕನಸುಗಳಿವೆ ಎಂಬುದನ್ನು ಸ್ವೀಕರಿಸುತ್ತಲೇ, 'ಕನಸುಗಳು ಹಾಗೂ ಪುರಾಣಗಳು ಜ್ಞಾನದಾಯಕಗಳು. ಅವು ನಮ್ಮ ಬಗ್ಗೆ ನಮಗೆ ತಿಳಿಸುತ್ತವೆ' ಎಂಬುದನ್ನು ಹೇಳುತ್ತಿರುವುದಾಗಿದೆ.

“ಪುರಾಣಗಳು ಮತ್ತು ಕನಸುಗಳ ಉದ್ದೇಶವಾದರೂ ಕೇವಲ ಭಾವವಿರೇಚನ ವಾಗಿರದೆ, ಜ್ಞಾನವಿಕಸನ (ಅಥವಾ ದರ್ಶನ) ವಾಗಿರುವುದು ಸಾಧ್ಯ. ಇದೇ ಯೂಂಗನ ಹೇಳಿಕೆಯು ನಮ್ಮಲ್ಲಿ ಎಬ್ಬಿಸುವ ಆಲೋಚನಾತರಂಗಗಳು.” (ಕೆ.ಎಲ್.ಗೋಪಾಲಕೃಷ್ಣಯ್ಯ, ಸಾಹಿತ್ಯಸಂವಾದ, 1993, ಪುಟ 14)

ಈ ಅಭಿಪ್ರಾಯವಾದಗಳು, ದರ್ಶನಗಳು ಮುಖ್ಯವೆನಿಸಿದರೂ, ಇವು ಪುರಾಣ ರಚನೆಯ ಬಗೆಗೆ ಮಾತ್ರ ಚಿಂತಿಸುವ ಗಟ್ಟಿ ಚಿಂತನೆಗಳು. ಇವು ಕಾಲ-ಕಾಲಕ್ಕೆ ಹರಿದು ಬರುವ, ಇಂದಿನವರ ಮನಸ್ಸನ್ನು ಸ್ಪಂದಿಸುವ, ಪುರಾಣದೊಳಗಿನ ಆಶಯಗಳ ಕಾಲಾತೀತವಾದ ಅಂಶಗಳ ಬಾಳಿಕೆಗೆ ಕಾರಣಗಳೇನು ? ....
ಎಂಬುದರೊಂದಿಗೆ.......................................
.....ಪ್ರತಿಯೊಬ್ಬ ಮಾನವನ ಅಂತರ್ಯದಲ್ಲೂ ಪೌರಾಣಿಕ ಮಾನವ ಇರುತ್ತಾನೆ — ಎಂಬುದು ಸತ್ಯವೇ ? ಪುರಾಣಗಳಲ್ಲಿನ ಆಶಯಗಳು ಜನಾಂಗದ ಸುಪ್ತಪ್ರಜ್ಞೆಯಲ್ಲಿ ಬೇರುಬಿಟ್ಟಿವೆ ಎಂಬುದೆ ? ಪೂರ್ವಿಕರಿಗೆ ಒದಗಿಬಂದ ಸಮಾನಂತರದ ಅನೇಕ ಅನುಭವಗಳ ಸಂಗ್ರಹ ಪ್ರಜ್ಞೆಯಲ್ಲಿ, ಸಮೂಹದಲ್ಲಿ ಹರಿದು ಬಂದಿದೆ ಎಂದೇ ? ಮನಶಾಸ್ತ್ರದ ಹಿನ್ನೆಲೆಯಲ್ಲಿ, ವೈಜ್ಞಾನಿಕ ಅಧ್ಯಯನದಡಿಯಲ್ಲಿ ಪುರಾಣಗಳ ಪ್ರಸ್ತುತತೆಯ ಬಗೆಗೆ 'ಏನೇ ಹೇಳಹೊರಟರೂ ಪೂರ್ಣವಾಗಲಾರದು.

ಮಗುವಿಗೆ ಸಮಕಾಲಿನ ಸಂದರ್ಭದ ರಾಜಕೀಯ ಜೀವನ ಸಾಹಸಗಳ ಕಥೆಯನ್ನು ಹೇಳಿದ ಹಾಗೆಯೇ, ಒಂದು ಪೌರಾಣಿಕ ಕಥೆಯನ್ನು ಹೇಳಿದಲ್ಲಿ ಮಗುವಿನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುವುದು ಪುರಾಣ ಕಥೆಯೇ. ಕಾರಣ "ಅಲ್ಲಿನ ಕಥೆಗಳು ಚಕಿತಗೊಳಿಸುತ್ತವೆ. ತಳ್ಳಂಕ ಅಸ್ಪಷ್ಟಭಯ, ಹಿಂಜರಿಕೆ, ಕಡೆಗೆ ಅಸಹ್ಯಕಲ್ಕ ತಳ್ಳುತ್ತವೆ. ಅಲ್ಲಿ (ಪುರಾಣ ಲೋಕದಲ್ಲಿ) ದೈನಂದಿನ ವ್ಯವಹಾರಿಕ ನಡವಳಿಕೆಯ ನೆನಪೇ ಬರಲಾರದು. ಬದಲಾಗಿ ಕನಸು, ಭ್ರಾಂತಿ, ವಿಹ್ವಲತೆಗಳು ತಾವೇತಾವಾಗಿ ಮುತ್ತುತ್ತವೆ. ಮನಸ್ಸಿನಾಳದ ದುರ್ಗಮ ಕರಾಳ ಪ್ರದೇಶಗಳಿಗೆ ಅಡಿಯಿಟ್ಟಂತೆ ಭಾಸವಾಗುತ್ತದೆ." (ಪ್ರೀತಿ.ಎನ್.ಕುಮಾರ, ಆಲೋಕ -- ಪ್ರಾಯೋಗಿಕ ಸಂಚಿಕೆ, ಜುಲೈ 1979, ಲೇಖನ — ಸಾಹಿತ್ಯ ಮತ್ತು ಮಿಥ) ಪುರಾಣದೊಳಗಿನ ಫ್ಯಾಂಟಸಿ ನೆನಪು ಅಳಿಸದಂತೆ ವಿಶಿಷ್ಟ ಅನುಭವನೀಡಿ ಸಮುದಾಯದೊಳಗೆ ನೆಲೆಸಿ ಬಿಡುತ್ತದೆ.

"ಮಾನವ ದೇಹ ಆನುವಂಶಿಕವಾದ ಹಲವು 'ಮೆಂಡಲಿನ್ ಕಣ' ಗಳಿಂದ ಆಗಿರುವಂತೆ (Mendalim Genes) ಮನಸ್ಸು ಕೂಡ ಹಲವಾರು ವಿಭಿನ್ನ ಘಟಕಗಳ ಸಂಯೋಗದಿಂದ ಆಗಿರುವುದು ಸಾಧ್ಯ ಇದರ ಜೊತೆಗೆ ಮನಸ್ಸಿನಲ್ಲಿ ಮೊದಲು ಇರದಿದ್ದ ಅಂಶಗಳನ್ನು 'ಕಸಿಮಾಡಿ' ಬೆಳೆಸುವುದೂ ಸಾಧ್ಯ."[1] ಪ್ರಾಚೀನ ಕಾಲದಿಂದಲೂ ಧರ್ಮಗುರುಗಳು, ಮಂತ್ರವೈದ್ಯರು, ಮನೋವಿಜ್ಞಾನಿಗಳು ಇದನ್ನು ಸಾರುತ್ತಾ ಬಂದಿದ್ದಾರೆ. ಸೂಚನೆಗಳು (Suggestions) ಮತ್ತು ಪ್ರಭಾವ (Influence) ಗಳು ಮನೋವಿಜ್ಞಾನದ ಸತ್ಯಸಂಗತಿಗಳು. ಪ್ರಾಚೀನ ಮತ್ತು ಆಧುನಿಕಚಿಂತಕರ ದೃಷ್ಟಿಸಂಗಮ ಮತ್ತು ಈ ಒಂದು ಕಡೆ ಕಾಣುತ್ತೇವೆ; ವ್ಯಕ್ತಿತ್ವವೆನ್ನುವುದು ಹಲವು ಘಟಕಗಳ ಸಂಕಲನದಲಬ್ಧಫಲ.."[1] ನಾಗರಿಕ ಜನಾಂಗಗಳ ನೀತಿ — ಅನೀತಿ

1. (ಕೆ.ಎಲ್.ಗೋಪಾಲ ಕೃಷ್ಣಯ್ಯ, ಕನ್ನಡ ಸಾಹಿತ್ಯದಲ್ಲಿ ಪುರಾಣ ಪ್ರಜ್ಞೆ, 1987, ಪುಟ — 95, ಉಲ್ಲೇಖಿತ C.G.Jung - Modern man in Search of a Sour - Page - 143 - 174.)

ವಿಧಿನಿಷೇಧಗಳು ಕೂಡ ಈ ಮೂಲರೂಪಗಳಿಂದಲೇ ಹುಟ್ಟಿ ಅವುಗಳ ಪ್ರಭಾವದಿಂದಲೇ ಬೆಳೆದಿವೆಯೆಂದು ಪ್ರತಿಪಾದಿಸಲಾಗಿದೆ. "ಆಧುನಿಕರಾದ ನಮ್ಮೆಲ್ಲರ ಒಳಮನಸ್ಸಿನಲ್ಲಿ ಆರ್ಷೇಯಂತಹ ಮಾನವನೊಬ್ಬ ಅಡಗಿ ಕುಳಿತಿದ್ದಾನೆಂಬುದೇ ಇದಕ್ಕೆ ಪೋಷಕವಾದ ಸಂಗತಿಯಾಗಿದೆ." (ಕೆ.ಎಲ್.ಗೋಪಾಲಕೃಷ್ಣಯ್ಯ, ಕನ್ನಡ ಸಾಹಿತ್ಯದಲ್ಲಿ ಪುರಾಣ ಪ್ರಜ್ಞೆ, 1987, ಪುಟ 83)

ಪುರಾಣವನ್ನು ಕುರಿತ ವಿಚಾರವಾದೀ ದೃಷ್ಟಿಕೋನ :–

ರ್ಯಾಷ್ನಲಿಸಂನ ಧೋರಣೆಯನ್ನು ಒಪ್ಪಿಕೊಂಡು ಪುರಾಣದ ಅತಿಮಾನುಷ ಘಟನೆ ಮತ್ತು ಪಾತ್ರಗಳನ್ನು ವೈಚಾರಿಕವಾಗಿ ವಿಮರ್ಶಿಸುವ ದೃಷ್ಟಿಕೋನ ವಾಗಿರುತ್ತದೆ. ಒಂದು ರೀತಿಯಲ್ಲಿ 'ವಾಸ್ತವ' ದ ನೈಜ ಅಂಶಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ನಡೆಸಿರುವ ಸಂಶೋಧನೆಯ ಫಲವಾದ ದೃಷ್ಟಿಕೋನ ಗಳಾಗಿರುತ್ತವೆ. ಕನ್ನಡದ ಮಟ್ಟಿಗಂತೂ ಈ ದೃಷ್ಟಿಯಲ್ಲಿ ಮುಖ್ಯವಾಗಿ ಎಸ್.ಎಲ್.ಭೈರಪ್ಪ ನವರ ಪರ್ವ ಕಾದಂಬರಿಯು ಮಹಾಭಾರತದ ಕಥೆ, ಪಾತ್ರ ಸನ್ನಿವೇಶಗಳನ್ನು ಆಧರಿಸಿದ್ದರೂ, ವಸ್ತು ನಿರ್ವಹಣೆ 'ವೈಚಾರಿಕ' ವಾಗಿದೆ. ಶಾಪ– ವರ, ಪವಾಡಗಳಿಗೆ ಸ್ಥಾನವಿಲ್ಲದೆ, ತರ್ಕಬದ್ಧವಾಗಿ ಪ್ರಾಚೀನ ಸಾಹಿತ್ಯದ ವಿಶ್ಲೇಷಣೆಗೆ ಒಂದು ನಿರ್ದಿಷ್ಟ ಚೌಕಟ್ಟನಲ್ಲಿ ಭಿನ್ನ ದೃಷ್ಟಿಕೋನದಲ್ಲಿ ಮಾನವಶಾಸ್ತ್ರೀಯ ಮತ್ತು ಸಮಾಜಶಾಸ್ತ್ರೀಯ ಅಧ್ಯಯನ ದೃಷ್ಟಿಯಲ್ಲಿ ಹೇಳುವ ಪ್ರಯತ್ನ ಮಾಡಿದ್ದಾರೆ.

'' ನಾನು ಭಾರತವನ್ನು ಓದಬೇಕಾಗಿದ್ದುದು ಸಾಹಿತ್ಯ ಕೃತಿಯಾಗಿಯಲ್ಲ. ಈ ದೇಶದ ಸಂಸ್ಕೃತಿಯು ಒಂದು ರೂಪತಾಳಿ ಬೇರೊಂದು ರೂಪದ ಸ್ಥಿತ್ಯಂತರ ದಲ್ಲಿದ್ದ ಕಾಲದ ಸ್ಪಷ್ಟ ಚಿತ್ರವಾಗಿ'' ಎಂದು ಕೃತಿಯ ಬಗ್ಗೆ ಹೇಳುವ ಲೇಖಕರು (ನಾನೇಕೆ ಬರೆಯುತ್ತೇನೆ. ಎಸ್.ಎಲ್.ಭೈರಪ್ಪ, 1980, ಪುಟ 20) ಕಾದಂಬರಿಯಲ್ಲಿ ಎಲ್ಲರ ಜನ್ಮ ಕಥೆಗೆ ಸಾಮಾಜಿಕ ಹಿನ್ನೆಲೆಯ ವಾಸ್ತವದ ಪರಿಚಿತ ಪಾಠಗಳನ್ನು ಕೊಡುವಾಗ ಶಾಸ್ತ್ರಬದ್ಧ ದೃಷ್ಟಿಯ ನಿರೂಪಣೆಯಿಂದ ಸಾಹಿತ್ಯದ ಸೂಕ್ಷ್ಮಗಳನ್ನು ಸರಳಗೊಳಿಸುವಂತೆನಿಸುತ್ತದೆ. ಪಾಂಚಾಲಿಯ ಪಂಚಪತೀತ್ವದ ಬಗ್ಗೆ, ಹಿಮಾಲಯದ ತಪ್ಪಲಿನಲ್ಲಿ ಈಗಲೂ ಅಲ್ಲಲ್ಲಿ ಆಚರಣೆಯಲ್ಲಿರುವ ಬಹುಪತೀತ್ವ ಪದ್ಧತಿಯನ್ನು ಸಮೀಕರಿಸಿರುವುದು

ಸಮಾಜಶಾಸ್ತ್ರೀಯ ಅಧ್ಯಯನದ ವೈರ ಣಿಯಾಗಿದೆ. ಭಗವದ್ಗೀತೆಯ ವಿಶ್ವರೂಪ ದರ್ಶನದ ಪ್ರಸಂಗವನ್ನು ಸಂಕಲ್ಪ ಪೂರ್ವಕವಾಗಿ ಕೈ ಬಿಟ್ಟ ಅವರು '' ಭಗವದ್ಗೀತೆ ನನ್ನ ಬರಹದಲ್ಲಿ ಬರಲೇಕೂಡದು , ಬಂದರೂ ಮನುಷ್ಯ ಸಂಬಂಧದ ಎರಡು ವಾಕ್ಯದಲ್ಲಿ ಮುಗಿಯಬೇಕೇ ವಿನಾ ತತ್ವ ಶಾಸ್ತ್ರದ ಸಂಗ್ರಹ ವಾಗಿಯಲ್ಲ'' ಎಂದು ಹೇಳುತ್ತಾರೆ. ತಮ್ಮದೇ ಆದ ವಿಚಾರ ಚೌಕಟ್ಟಿನಲ್ಲಿ ನಿಂತು ಸಂಶೋಧನಾ ಸಾಮಗ್ರಿಗಳನ್ನು ಬೆರಸಿ ಸಾಹಿತ್ಯ ಲಕ್ಷಣಗಳನ್ನು ಉಳಿಸಿ ಕೊಂಡು ಒಂದು ಕಾದಂಬರಿಯಾಗಿ ಬಂದಿರುವ ಪರ್ವ ವಿಚಾರವಾದೀ ದೃಷ್ಟಿಕೋನದ ಪೌರಾಣಿಕ ಕೃತಿಯಾಗಿದೆ. ಇದೇ ಮಹಾಭಾರತ ಪುರಾಣ ವಸ್ತುವನ್ನು ಆಧರಿಸಿದ 'ಯುಗಾಂತ' ಶ್ರೀಮತಿ. ಇರಾವತಿ ಕರ್ವೆ ಯವರು, ಮಾನವಶಾಸ್ತ್ರ, ಸಮಾಜಶಾಸ್ತ್ರಗಳನ್ನಾಧರಿಸಿ ರಚಿಸಿದ ಪ್ರಾಮಾಣಿಕ ಸಂಶೋಧನ ಲೇಖನಮಾಲೆಯಾಗಿದೆ. ಇಲ್ಲಿ ಸಾಮಾಜಿಕ ಸ್ಥಿತಿಗಳಲ್ಲಿ 'ಭಾರತೀಯ' ಮೌಲ್ಯಗಳಲ್ಲಾದ ಪರಿವರ್ತನೆಯ ವಿಶ್ಲೇಷಣೆಯಾಗಿದೆ.

ಮಾನವಶಾಸ್ತ್ರೀಯ ಮತ್ತು ಸಮಾಜ ಶಾಸ್ತ್ರೀಯ ದೃಷ್ಟಿಕೋನ ಗಳು ಪುರಾಣ ಕಥನಗಳು ಮನುಷ್ಯನ ವಿಕಾಸದ ಕಥೆಯನ್ನು ಹೇಳುತ್ತವೆ. ಪುರಾಣ ಕಥನಗಳಿಂದ ಮನುಷ್ಯ ಸಮಾಜದ ವಿಕಾಸ ಚಿತ್ರವನ್ನು ರೂಪಿಸಿಕೊಳ್ಳಲು ಸಾಧ್ಯ ಎಂಬ ದೃಷ್ಟಿ. ಉದಾ., ರಾಮಾಯಣವನ್ನು ಮನುಷ್ಯ ವಿಕಾಸದ ಬೇರೆ ಬೇರೆ ಹಂತಗಳ (ವಾನರ, ರಾಕ್ಷಸ, ಕಾಡಿನ ಬುಡಕಟ್ಟುಗಳು, ಋಷಿಗಳು , ನಾಗರಿಕರು ಇತ್ಯಾದಿ) ಚಿತ್ರಣವಿರುವ ಪುರಾಣ ಎಂದು ನೋಡುವುದು. **Frazer** ನ Golden Bough ಈ ದೃಷ್ಟಿಯ ಉತ್ತಮ ಉದಾಹರಣೆ. ಇಲ್ಲಿ ritual – ಆಚರಣೆಗಳಿಗೂ ಪುರಾಣ ಕಥನಗಳಿಗೂ ಇರುವ ಸಂಬಂಧಕ್ಕೆ ಪ್ರಾಮುಖ್ಯ ಸಂದಿರುತ್ತದೆ.

ತೆಲುಗಿನ ಮುಪ್ಪಾಳ ರಂಗನಾಯಕಮ್ಮ ನವರು ರಾಮಾಯಣದ ಅಸಂಬದ್ಧವಾದ ಅತಾರ್ಕಿಕ ಘಟನೆಗಳನ್ನು ವಿಶ್ಲೇಷಿಸಿ ಬರೆದ 'ರಾಮಾಯಣ ವಿಷವೃಕ್ಷವು' ನ್ನು ಆಧರಿಸಿ ಬಂಜಗೆರೆ ಜಯ ಪ್ರಕಾಶ ರವರ 'ಇದೇ ರಾಮಾಯಣ' ದಂತಕಥೆ ವಾಸ್ತವತೆಗಳನ್ನು ತೂಗಿನೋಡುವತ್ತ ಇದೆ. ಇವರೂ ಕೂಡ ಮಾನವ ಶಾಸ್ತ್ರ, ಮನಶಾಸ್ತ್ರ, ಸಮಾಜಶಾಸ್ತ್ರಗಳ ಶಾಸ್ತ್ರೀಯ ಅಧ್ಯಯನದೊಳಗಿಂದ ರಾಮಾಯಣದ 'ವಾಸ್ತವತಾ ವಾದೀ' ನೆಲೆಯನ್ನು ಹುಡುಕುವ ಪ್ರಯತ್ನ ನಡೆಸಿದ್ದಾರೆ.

ಹೀಗೆ ಪುರಾಣವನ್ನು ಚಾರಿತ್ರಿಕ, ವೈಚಾರಿಕ, ಮಾನವ ಶಾಸ್ತ್ರೀಯ, ಸಮಾಜಶಾಸ್ತ್ರೀಯ ದೃಷ್ಟಿಕೋನಗಳ ಅಲ್ಲದೆ, 'ಅನ್ಯೋಕ್ತಿ ದೃಷ್ಟಿಕೋನ ದಲ್ಲೂ, ಧಾರ್ಮಿಕ ಮತ್ತು ತಾತ್ವಿಕ ದೃಷ್ಟಿಕೋನದಲ್ಲಿಯೂ ನೋಡಬಹುದು.

<u>ಅನ್ಯೋಕ್ತಿ ದೃಷ್ಟಿಕೋನ</u> :-

ಪುರಾಣಕಥೆಯ ಪಾತ್ರಗಳು ಮತ್ತು ವಿವರಗಳನ್ನು ನಿಸರ್ಗ ವ್ಯಾಪಾರದ ಪ್ರತಿಬಿಂಬಗಳೆಂಬಂತೆ ವಿವರಿಸುವ ದೃಷ್ಟಿ. ಉದಾಹರಣೆಗೆ, ಮೂರು ಸಂಪುಟಗಳಲ್ಲಿ ಬಂದಿರುವ Dictionary of Myth, Folklore and Dreams ಪುಸ್ತಕವು ಈ ಧೋರಣೆಯನ್ನುಳ್ಳದ್ದು.

<u>ಧಾರ್ಮಿಕ ಮತ್ತು ತಾತ್ವಿಕ ದೃಷ್ಟಿಕೋನ</u> :-

ಪುರಾಣ ಕಥೆಗಳನ್ನು ಧರ್ಮ ಮತ್ತು ತತ್ವಶಾಸ್ತ್ರದ ವಿವಿಧ ಪರಿಕಲ್ಪನೆಗಳು ಮತ್ತು ಧೋರಣೆಗಳ ಸಾಹಿತ್ಯಕ ಅಭಿವ್ಯಕ್ತಿ ಎಂದು ವಿವರಿಸುವ ದೃಷ್ಟಿಕೋನ. ಉದಾ: ದ್ರೌಪದಿಯ ಐವರು ಗಂಡಂದಿರನ್ನು ಪಂಚ ಭೂತಗಳು ಎಂದೂ ದ್ರೌಪದಿಯನ್ನು ಪ್ರಕೃತಿಯ ಸಂಕೇತವೆಂದೂ ನೋಡುವುದು; ರಾಸಲೀಲೆಯನ್ನು ವೇದಾಂತದ ದೃಷ್ಟಿಯಿಂದ ವಿವರಿಸುವುದು ಇತ್ಯಾದಿ.

ಪುರಾಣಗಳ ಸ್ತ್ರೀವಾದೀ ಅಧ್ಯಯನ :—

ಇದು ಈಚೆಗೆ ಪ್ರಬಲವೆನಿಸುತ್ತಿರುವ ದೃಷ್ಟಿ. " ಹೊಸ ವಿಚಾರ, ಎಚ್ಚರ ತಾತ್ವಿಕ ನೆಲೆಗಳು ಸಾಹಿತ್ಯಕ್ಕೆ ನೇರಿದಂತೆಲ್ಲಾ ಹಳೆಯ ಚಾಕಟ್ಟಿನಲ್ಲಿ ಬಂದ ಪುರಾಣಇತಿಹಾಸಕ್ಕೆ ಹೊಸ ಸ್ಪಂದನದಿಂದ ಹೊಸರೂಪ ಕೊಡುವ ಪ್ರಯತ್ನ ತನ್ನ ಸಾಹಿತ್ಯದಲ್ಲಿ ಹೊಸದಲ್ಲ.."[1] ಒಂದು ಸಂಸ್ಕೃತಿಯಲ್ಲಿ ತುಳಿತಕ್ಕೆ ಒಳಗಾದ ವರ್ಗ ಎಚ್ಚೆತ್ತುಕೊಂಡಾಗ ಚರಿತ್ರೆಗೆ ತಿರುಗಿ ಬರುವ ರಭಸ ಹೆಚ್ಚಾಗಿರುತ್ತದೆ. ತಪ್ಪಾಗಿ ಅರ್ಥೈಸಲ್ಪಟ್ಟದ್ದನ್ನು ಗುರುತಿಸಲು ಪ್ರಯತ್ನಿಸುತ್ತವೆ. ಸಂಸ್ಕೃತಿಯನ್ನೇ 'ಒರೆಹಚ್ಚಿನೋಡುತ್ತದೆ. 'ಹೊಸದಾದ ತತ್ವ ಸ್ಥಾಪನೆಗೆ ಚರಿತ್ರೆ — ಪುರಾಣ — ಇತಿಹಾಸಗಳು ಕೀಲಕ್ಕೆ ಆಗಿರುತ್ತವೆ. ಈ ದಿಕ್ಕಿನಲ್ಲಿ ಮಹಿಳಾ ಸಾಹಿತ್ಯವು ಮಹಿಳಾ ದೃಷ್ಟಿಕೋನವನ್ನು ರೂಪಿಸಿಕೊಂಡು ಪುರಾಣಗಳನ್ನು ತೂಗಿ ನೋಡುತ್ತದೆ. ಕನ್ನಡ ಸಾಹಿತ್ಯದಲ್ಲಿ ಈನಿಟ್ಟಿನಲ್ಲಿ ಬಂದ ಕೃತಿಗಳಲ್ಲಿ ಮುಖ್ಯವಾದವು ಅನುಪಮಾನಿರಂಜನರ ' ಮಾಧವಿ' ಎಚ್.ವಿ.ಸಾವಿತ್ರಮ್ಮ ನವರ ' ಸೀತೆ — ರಾಮ — ರಾವಣ ವಿಮುಕ್ತಿ. ಮಾಧವಿ ತನ್ನ ವಿವಾಹದ ಆಂತ್ಯಯ ಸ್ವಾತಂತ್ರ್ಯವನ್ನು ಬಲಿಕೊಟ್ಟರೂ, ಜೊತೆಕೂಡುವ ಗಂಡಸಿನೊಡನೆ ಪಡೆಯುದೆ ಹಡೆಯುವ ಮಕ್ಕಳಲ್ಲಿ ತಾಯ್ತನವನ್ನು ಅನುಭವಿಸಿದೆ ಹೆಣ್ಣಾಗಿ, ಸಿಡಿದು, ಸ್ವ—ಅನುಭವದ ಸ್ವಂತಿಕೆಯ ವ್ಯಕ್ತಿತ್ವದಿಂದ ಹೆಣ್ಣಿನ ವಿರುದ್ಧದ ವ್ಯವಸ್ಥೆಗೆ ಕೆಲವು ಮೂಲಭೂತ ಪ್ರಶ್ನೆಗಳನ್ನು ಕೇಳುವಂತಿದೆ.

---

1. ಮಹಿಳೆ ಸಾಹಿತ್ಯ ಸಮಾಜ — ವಿಜಯಾದಬ್ಬೆ
ಲೇಖನ — ಮಹಿಳಾ ಸಾಹಿತ್ಯದಲ್ಲಿ ಪ್ರತಿಭಟನೆ, ಪುಟ 10
ರಚನಾ ಪ್ರಕಾಶನ ಮೈಸೂರು, ಮೊದಲ ಮುದ್ರಣ 1989.

ಸಾವಿತ್ರಮ್ಮ ನವರ 'ಸೀತೆ – ರಾಮ – ರಾವಣ' 'ವಿಮುಕ್ತಿ' ಗಳು ರಾಮಾಯಣದ ಚೌಕಟ್ಟನ್ನು ಮುರಿಯದೆ, ಸ್ತ್ರೀದೃಷ್ಟಿಕೋನದಿಂದ ರಾಮಾಯಣವನ್ನು ತೂಗಿನೋಡಿರುವ ಕೃತಿಗಳಾಗಿವೆ. ಇನ್ನೂ ಕಥಾಲೋಕ ದಲ್ಲಿ ಶಕುಂತಲೆಯ ಮಾತುಗಳಿಂದಲೇ ಅವಳ ಜೀವನ, ಅನುಭವಗಳನ್ನು ಸಂವೇದನೆಯ ಸೂಕ್ಷ್ಮತೆಯೊಂದಿಗೆ ತೆರೆದಿಡುವ ವೈದೇಹಿಯವರ 'ಶಕುಂತಲೆ ಯೊಂದಿಗೆ ಕಳೆದ ಅಪರಾಹ್ನ' ಪೌರಾಣಿಕ ಪಾತ್ರವನ್ನು ವಾಸ್ತವದ ಸ್ತ್ರೀದೃಷ್ಟಿ ಯಲ್ಲಿ ನೋಡಿದೆ. ಹಾಗೆಯೇ ಧರಣಿದೇವಿಯವರ 'ಯುಗದ ತೆರೆಯ ಹಿಂದೆ' ಎಂಬ ಸಣ್ಣ ಕಥೆ ಮಹಾಭಾರತದ ಸ್ತ್ರೀಅವಜ್ಞೆಗೆ ಒಳಗಾಗಿರುವ ಸ್ತ್ರೀಲೋಕದ ವರ್ತಾನಮಾತನಾಡಿದಂತೆ, ಸೂಕ್ಷ್ಮ ವಿವರಗಳನ್ನು ಬಿಡಿಸಿ, ಸಾಮಾನ್ಯ ಸ್ತ್ರೀಯರು ಸಂಭಾಷಿಸುವ ಶೈಲಿಯಲ್ಲಿದೆ. ಇವೆಲ್ಲವೂ ಪೌರಾಣಿಕ ನೆಲೆಗಟ್ಟಿನಲ್ಲಿ ಸ್ತ್ರೀದೃಷ್ಟಿ ಕೋನವನ್ನು ಹಾಯಿಸುವ, ಬಿಂಬಿಸುವ ಕೃತಿಗಳಾಗಿವೆ.

ಅಧ್ಯಾಯ ಮೂರು

ಪುರಾಣ ಮತ್ತು ಸಾಹಿತ್ಯ ಸಂಬಂಧಗಳ ಅಧ್ಯಯನ :-

ಈ ಮೊದಲ ಅಧ್ಯಾಯಗಳಲ್ಲಿ ಪುರಾಣ ಮತ್ತು ಸಾಹಿತ್ಯದ ನಡುವೆ ಇರುವ ಸಂಬಂಧವೆಂಥದು ಎಂಬುದನ್ನು ವಿವರಿಸಲಾಗಿದೆ. ಕನ್ನಡ ಸಾಹಿತ್ಯದಲ್ಲಿ ಪುರಾಣ ಮತ್ತು ಸಾಹಿತ್ಯಗಳ ಸಂಬಂಧದ ಬಗ್ಗೆ ಹಲವರಿಂದ ಅಲ್ಲದಿದ್ದರೂ , ಕೆಲವರಿಂದ ಆಳವಾದ ವಿಸ್ತಾರವಾದ ಅಧ್ಯಯನಗಳು ನಡೆದಿವೆ. ಅವರಲ್ಲಿ ಡಾ. ಕೆ.ಎಲ್.ಗೋಪಾಲಕೃಷ್ಣಯ್ಯ ನವರು ಮೊದಲಿಗರು. ಇವರ 'ಕನ್ನಡ ಸಾಹಿತ್ಯದಲ್ಲಿ ಪುರಾಣ ಪ್ರಜ್ಞೆ.' 'ಪುರಾಣ.' 'ಸಾಹಿತ್ಯ ಸಂವಾದ.' ಈ ಕೃತಿಗಳು ಮುಖ್ಯವಾಗಿ ಸಾಹಿತ್ಯದೊಳಗಿನ ಪುರಾಣದ ವಿಸ್ತೃತ ಅಧ್ಯಯನಕ್ಕೆ ಮೀಸಲಾಗಿವೆ. ''ಕನ್ನಡ ಸಾಹಿತ್ಯದಲ್ಲಿ ಪುರಾಣ ಪ್ರಜ್ಞೆ'' ಗೋಪಾಲಕೃಷ್ಣಯ್ಯ ನವರ ಪಿಎಚ್.ಡಿ.ನಿಬಂಧವಾಗಿದ್ದು ಪುರಾಣ ಪ್ರಜ್ಞೆಯ ನಿರೂಪಣೆಯಲ್ಲಿ ಸಮಗ್ರತೆಯಿದೆ. ಪುರಾಣ – ಸಾಹಿತ್ಯ, ಪುರಾಣ – ಭಾಷೆ, ಪುರಾಣ – ವಿಮರ್ಶೆ, ಪುರಾಣ ಪ್ರತೀಕಗಳ ಮೂಲ ಅಧ್ಯಯನದೊಡನೆ, 'ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಪುರಾಣ ಪ್ರಜ್ಞೆಯಿಂದ ಕೃತಿಗಳಲ್ಲಿನ ಪರಿಣಾಮವನ್ನು ಸಾಹಿತ್ಯದ ಎಲ್ಲ ಘಟ್ಟಗಳಲ್ಲಿಯೂ ವಿಶ್ಲೇಷಿಸುತ್ತಾರೆ. ಮಾನವಶಾಸ್ತ್ರ, ಮನಶಾಸ್ತ್ರಗಳ ಹಿನ್ನೆಲೆಯಲ್ಲಿ ಪುರಾಣದ ಸಂದರ್ಭಗಳ ಚರ್ಚೆಯನ್ನು ಒಳಗೂಡಿಸಿಕೊಂಡು ಹೊಸಬಗೆಯಲ್ಲಿ ವಿಷಯ ಪ್ರತಿಪಾದನೆ ಮಾಡುತ್ತಾ ಕನ್ನಡ ಸಾಹಿತ್ಯಕ್ಕೆ ವಿಶಿಷ್ಟ ಅಧ್ಯಯನದ ಕೊಡುಗೆಯನ್ನು ನೀಡಿದ್ದಾರೆ.

ಕನ್ನಡ ಸಾಹಿತ್ಯ ಪುನರ ಮೌಲ್ಯೀಕರಣ ಸಂದರ್ಭದಲ್ಲಿ ವಿವಿಧ ಲೇಖಕರಿಂದ ವಿಶ್ಲೇಷಣೆಗೆ ಒಳಗಾಗಿರುವ 'ಕನ್ನಡ ಸಾಹಿತ್ಯದಲ್ಲಿ ಚರಿತ್ರೆ ಮತ್ತು ಪುರಾಣ' ವಸ್ತು ನಿರೂಪಣೆಯ ದೃಷ್ಟಿಯಿಂದ ಮಹತ್ವದ್ದಾಗಿದೆ.

ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಮಂಟಪ ಮಾಲೆಯ 'ಪುರಾಣ' ಓ.ಎಲ್. ನಾಗಭೂಷಣ ಸ್ವಾಮಿಯವರು ಕರ್ತೃತ್ವದಲ್ಲಿ ಪುರಾಣವೆಂಬ ಪರಿಕಲ್ಪನೆಯ ಹಲವು ಮುಖಗಳನ್ನು ಸರಳವಾಗಿ ಸ್ಪಷ್ಟವಾಗಿ ಪರಿಚಯಿಸುವಲ್ಲಿ ಯಶಸ್ವಿಯಾಗಿದೆ.

ಕರ್ನಾಟಕ ಸಾಹಿತ್ಯ ಅಕಾಡೆಮಿಯು ಅಂತರ ಶಿಸ್ತೀಯ ಅಧ್ಯಯನದ ಯೋಜನೆಯಡಿ ಹೊರಬಂದ ಮಲ್ಲೇಪುರಂ, ಜಿ. ವೆಂಕಟೇಶ ರವರ 'ಸಾಹಿತ್ಯ ಮತ್ತು ಪುರಾಣ' ಕೃತಿಯೂ ಪುರಾಣದ ಅಧ್ಯಯನದ ಬಗ್ಗೆ ಕೊಡುಗೆಯನ್ನು ಸಾಹಿತ್ಯಕ್ಕೆ ನೀಡುವಲ್ಲಿ ಶ್ರಮಿಸಿದೆ.

ಪುರಾಣಗಳ ಬಹುಮುಖತೆ :-

ಪುರಾಣಗಳಲ್ಲಿ ಹಲವು ಬಗೆ ಇವೆ. ಸ್ಥಳೀಯ ಪುರಾಣಗಳು, ಐತಿಹಾಸಿಕ ಪುರಾಣಗಳು, ಭಾರತೀಯ ವೈದಿಕ ಪುರಾಣಗಳು, ಅವೈದಿಕ ಪುರಾಣಗಳು, ಅಂತರಾಷ್ಟ್ರೀಯ ಪುರಾಣಗಳು ಹಲವಾರು ರೀತಿಯಲ್ಲಿ ವಿಂಗಡಿಸಬಹುದು. ಮನುಷ್ಯನ ಅನುಭವಗಳ ಉಗ್ರಾಣವಾಗಿರುವ ಪುರಾಣಗಳು ಎಲ್ಲಾ ಸಮಾಜ ಸಂಸ್ಕೃತಿಗಳಲ್ಲೂ ಒಂದಿಲ್ಲೊಂದು ಬಗೆಯಲ್ಲಿ ಬೇರು ಬಿಟ್ಟಿವೆ. ಅತಾರ್ಕಿಕವಾದ ತರ್ಕಾತೀತವಾದ, ಅವೈಜ್ಞಾನಿಕ, ಅವೈಚಾರಿಕವಾದ, ಪ್ರಕೃತಿ ನಿಯಮಗಳಿಗೆ ವಿರೋಧವಾದ ಸಂಗತಿಗಳನ್ನು ' ಸತ್ಯ ' ಎನ್ನುವಂತೆ ಅದ್ಭುತವಾಗಿ ಹೇಳುತ್ತಾ, ಪ್ರಕೃತಿಯ ಸೃಷ್ಟಿಗಳಿಗೆ ತನ್ನದೇ ಆದ ವಿವರಣೆ ನೀಡುತ್ತಾ ಇಂದಿಗೂ ತನ್ನ ಅಸ್ತಿತ್ವವನ್ನು ಹೇಗೋ ಕಾಪಾಡಿಕೊಂಡು ಬಂದಿರುವ ಪುರಾಣ, ಸೃಜನ ಶೀಲ ಮನಸ್ಸಿನ ಹಲವು ಪ್ರಶ್ನೆಗಳಿಗೆ ತುತ್ತಾಗುತ್ತವೆ . ಬದುಕಿನ ಹಲವು ಸಮಸ್ಯೆಗಳಿಗೆ ಉತ್ತರ ಪಡೆಯಲು ಆಧುನಿಕ ಮನಸ್ಸೊಂದು ಪುರಾಣ ಇತಿಹಾಸಗಳ ವಸ್ತು ವಿವರಗಳನ್ನು ಕೆದ ಕುತ್ತದೆ. ಅಭಿವ್ಯಕ್ತಿಯ ಸ್ಪಷ್ಟತೆಗಾಗಿ ಅವುಗಳಲ್ಲಿ ತನಗೆ ಬೇಕಾದುದನ್ನು ಹೆಕ್ಕುತ್ತದೆ. ಹೀಗೆ ಪೌರಾಣಿಕ ಪ್ರಾಚೀನ ವಿವರಗಳಿಗೆ ಮೊರೆ ಹೋಗುವುದಕ್ಕೆ ಕಾರಣ ಹಲವಾರಿರಬಹುದು.

1) ಆಧುನಿಕದಲ್ಲಿದ್ದು ಪ್ರಾಚೀನ ಸಾಹಿತ್ಯ ಸಂಸ್ಕೃತಿಗಳ ಸಂದರ್ಭಗಳೊಂದಿಗೆ ಮಾನಸಿಕ ಸಂಬಂಧ ಮತ್ತು ಸಂವಾದ ಸ್ಥಾಪಿತಗೊಂಡಿರಬಹುದು.

2) ಸಮಾಜದಲ್ಲಿ ಹೆಚ್ಚು ಜನರಿಗೆ ಪರಿಚಿತವಿರುವ , ನೆನಪಿನಲ್ಲಿ ಉಳಿದಿರುವ, ಬೇಗ ಕಣ್ಮುಂದೆ ಬರುವ ವಸ್ತು — ಪಾತ್ರ — ಘಟನೆಗಳಿಂದ ಸಮಸ್ಯೆಯನ್ನು ಸರಳವಾಗಿ ಬಿಡಿಸಿ ಹೇಳಬಹುದಾದ ಅನುಕೂಲತೆಯಿರಬಹುದು.

ಪ್ರಾಚೀನ — ಪೌರಾಣಿಕ, ಸಾಹಿತ್ಯವನ್ನು ತಮ್ಮ ರೀತಿಯಿಂದಲ್ಲಿ ತರುವಾಗ ಕೆಲವು ಅಂಶಗಳು ಸ್ಪಷ್ಟಗೊಳ್ಳುತ್ತವೆ.

1) ಪುರಾಣದ ಬಗೆಗೆ ವಿಮರ್ಶಾ ಧೋರಣೆ ಕಂಡುಬರುವುದು.
2) ಪುರಾಣ ಪಾತ್ರಗಳ ವರ್ತನೆಗೆ ಹಿನ್ನೆಲೆಯನ್ನು ವಿವರಿಸಿ ಕಾರಣಗಳನ್ನು ಕೊಡುವುದರೊಂದಿಗೆ ತಮ್ಮ ನಿಲುವನ್ನು ಸ್ಪಷ್ಟಪಡಿಸುವುದು.
3) ಪುರಾಣ ಪಾತ್ರಗಳ ಮಯಾಂತರ ಹೊಸ ಆಶಯವನ್ನು ಸೃಷ್ಟಿ ಮಾಡುವುದು
4) ಪುರಾಣ ಪಾತ್ರಗಳಿಗೆ ಆಧುನಿಕತೆ ತಂದು ಕೊಡುವುದು.
5) ಆಧುನಿಕರನ್ನೇ ಪುರಾಣ ಪಾತ್ರಗಳಿಗೆ ಸಮೀಕರಿಸುವುದು.......
ಇತ್ಯಾದಿ.

ಇಲ್ಲಿ ಬಳಕೆಯಾಗಿರುವ ' ಪುರಾಣ ಪಾತ್ರ ' ಗಳ ವಿವರಣೆಯನ್ನು ಸ್ಪಷ್ಟಗೊಳಿಸೋಣ . ಪುರಾಣ ಪಾತ್ರಗಳು ಇಂದು ನಾವು ಅರ್ಥ ಮಾಡಿ ಕೊಳ್ಳುತ್ತಿರುವ ಹಾಗೆ, ಪಾಶ್ಚಾತ್ಯರು ಅರ್ಥ ಮಾಡಿಕೊಳ್ಳುವ ಹಾಗೆ ಇರುವುದಿಲ್ಲ. ' ಆಧುನಿಕ ' ಪಾತ್ರಗಳಲ್ಲಿ ಬದಲಾವಣೆ ಇರುತ್ತದೆ. ಯಾವುದೋ ಘಟನೆಗೆ ಅನುಭವಕ್ಕೆ ಸಿಕ್ಕಿಹಾಕಿಕೊಂಡು ಪಾತ್ರಗಳು ಮೂಲದಲ್ಲೇ ಬದಲಾಗುತ್ತವೆ. ' ಪೌರಾಣಿಕ ' ಪಾತ್ರಗಳು ಸೀಮಿತ ಚೌಕಟ್ಟಿನೊಳಗೆ ಸಂಘರ್ಷಿಸುತ್ತವೆ. ಈ ಪಾತ್ರಗಳಿಗೆ ನಿರ್ದಿಷ್ಟವಾಗಿ ಗುರುತಿಸುವ ಗುಣಗಳಿದ್ದು, ಅವು ತದ್ವಿರುದ್ಧವಾಗಿ ಯಾವುದೋ ಘಟನೆಗಳಲ್ಲಿ ವರ್ತಿಸಿದ್ದು ಇದ್ದರೂ, ಮೂಲ ಗುಣಗಳ ಪ್ರತಿನಿಧಿಯೇ ಆಗಿರುತ್ತವೆ. ಪುರಾಣ ಪಾತ್ರಗಳಲ್ಲಿ ಪಾತ್ರದ ಬೆಳವಣಿಗೆ ಎನ್ನುವುದು ಇರುವುದಿಲ್ಲ.

ಉದಾ:— ರಾವಣನನ್ನು ಆರಂಭದಲ್ಲಿ ವೀರ, ನ್ಯಾಯನಿಷ್ಠುರ ಇತ್ಯಾದಿ ಹೀರೋಯಿಕ್ ಗುಣಗಳ ಪಟ್ಟಿಯಲ್ಲಿ ಇಟ್ಟು ಕಥೆ ಬೆಳೆಸುವಾಗ ಅನೇಕ

ಘಟನೆಗಳಲ್ಲಿ ರಾಮನ ವರ್ತನೆ ಧೀರನಂತೆ ನ್ಯಾಯವಾದಿಯಂತೆ ಕಾಣ ದಿದ್ದರೂ, ಆತ ಅದೇ ಗುಣಗಳಿಂದ ಶ್ಲಾಘಿಸಲ್ಪಡುತ್ತಾನೆ.

' ಆಧುನಿಕ ' ಪಾತ್ರಗಳು ಯಾವುದೋ ಘಟನೆಗೆ ಅನುಭವಕ್ಕೆ ಸಿಕ್ಕಿಹಾಕಿಕೊಂಡು ಮೂಲದಲ್ಲೇ ಬದಲಾವಣೆ ಆಗುತ್ತಾ ಬೆಳೆಯುತ್ತವೆ. ಆದರೆ ' ಪೌರಾಣಿಕ ' ಪಾತ್ರಗಳು ಹಾಗಲ್ಲ : ಘಟನೆಗಳು ಬದಲಾದರೂ, ಘಟನೆಗಳಲ್ಲಿ ಸಿಕ್ಕಿದ ಪಾತ್ರಗಳು ಬದಲಾದರೂ, ನಿರೂಪಣೆಯಲ್ಲಿ ಮಾತ್ರ ಪಾತ್ರ ಒಂದೇ ರೀತಿಯಾಗಿರುತ್ತದೆ. ಆಧುನಿಕ ಮನಸ್ಸುಗಳಿಗೆ ಇದು ಜೀರ್ಣಿಸಿಕೊಳ್ಳಲಾಗದ ' ಸತ್ಯ ' ವಾಗುತ್ತದೆ. '' ಮನುಷ್ಯನ ಎಲ್ಲ ರಾಗದ್ವೇಷಗಳು, ಭಾವನೆ, ಚಿಂತನೆಗಳೂ, ಸಮಸ್ಯೆ ಸವಾಲುಗಳನ್ನೂ ಮುಖ್ಯವಾಗಿ ತೆಗೆದುಕೊಳ್ಳುವ ವಾಸ್ತವತಾವಾದಿಗಳು ಪೌರಾಣಿಕ ಜಗತ್ತಿನ ಮಹಾ ವ್ಯಕ್ತಿಗಳನ್ನು ಕುರಿತ ವಸ್ತುಗಳನ್ನೇ ಮಾದರಿ ಗಳನ್ನಾಗುಳ್ಳ ಅಭಿಜಾತವಾದವನ್ನು ತಿರಸ್ಕರಿಸುತ್ತಾರೆ ''.

ಪ್ರಸ್ತುತ ಸಾಮಾಜಿಕ ಸಂದರ್ಭದಲ್ಲಿ ಪುರಾಣಗಳು ಪೂಜನೀಯ ಕೃತಿ ಗಳಾಗಿ ಕಾಣಿಸಿಕೊಂಡಾಗ ಪುರಾಣವೊಂದು ಕೆಲಸಕ್ಕೆ ಬಾರದ ವಸ್ತುವಾಗಿ ಮಾರ್ಪಡುತ್ತದೆ. ಅದೇ ಪುರಾಣವನ್ನು ವಿಮರ್ಶೆಯ ನೆಲೆಗಳಿಗೆ ಒಪ್ಪಿಸಿ, ವರ್ತಮಾನದ ಸಂದರ್ಭಕ್ಕೆ ತಕ್ಕ ಹಾಗೆ ಮಾರ್ಪಡಿಸಿಕೊಂಡಾಗ, ಸಮಸ್ಯೆಯ ಸವಾಲುಗಳಿಗೆ ಸಲಕರಣೆಯ ಮೂಲವಾಗಿ ಬಳಸಿಕೊಂಡಾಗ, ಕಾರಣದ ಮೂಲವಾಗಿ ನೋಡುವಾಗ ಪುರಾಣ ಪ್ರಸ್ತುತವೆನಿಸುತ್ತದೆ.

ಪೌರಾಣಿಕವನ್ನು ತಮ್ಮ ನಿತ್ಯ ಸಮಸ್ಯೆಗಳ ಸಿಕ್ಕು ಬಿಡಿಸುವ ಹಣಿಗೆ ಯನ್ನಾಗಿ ಮಾಡಿಕೊಳ್ಳುವ ಸಂದರ್ಭಗಳು ಹಲವಿರುತ್ತವೆ. ಉದಾಹರಣೆಗೆ ಆಧುನಿಕತೆಯ ಮುಖ್ಯ ಲಕ್ಷಣವಾದ ಶಿಕ್ಷಣ ನಮ್ಮ ಸಮಾಜದಲ್ಲಿ ಎಲ್ಲರಿಗೂ ಸಿಗುತ್ತಿಲ್ಲ ಎನ್ನುವುದನ್ನು ಪ್ರತಿನಿಧಿಸುವಾಗ 'ಏಕಲವ್ಯ - ದ್ರೋಣರ ಕಥಾವಸ್ತು

ಗಮನ ಸೆಳೆಯುತ್ತದೆ. ನಮ್ಮ ಕಾಲದ ರಾಜಕೀಯ ರಂಗವನ್ನು ವಿಮರ್ಶಿಸುವಾಗ ಪೌರಾಣಿಕ ರಾಜಕಾರಣಿಗಳಾದ, ರಾಮ, ಕೃಷ್ಣ, ಚಾಣಕ್ಯ, ಇತ್ಯಾದಿ ವ್ಯಕ್ತಿಗಳು ಪ್ರತೀಕಗಳಾಗುತ್ತಾರೆ. ಪ್ರೇಮದ ತಪಸ್ಸು ಸಿದ್ಧಿಗಳಿಗೆ ರಾಧಾ–ಮಾಧವ , ಪುಂಡರೀಕ – ಮಹಾಶ್ವೇತೆ ಶಕುಂತಳೆ – ದುಷ್ಯಂತರ ಪಾತ್ರಗಳು ಉದಾಹರಿಸಲ್ಪಡುತ್ತವೆ.

'ರಾಮಜನ್ಮ ಭೂಮಿ' ವಿವಾದದ ಸಂದರ್ಭದಲ್ಲಿ 'ರಾಮ' ಎಲ್ಲರ ಬರಹದಲ್ಲಿ ಚಲ್ಲಾಪಿಲ್ಲಿಯಾಗಿದ್ದಾನೆ. ಇದು ನಿರ್ದಿಷ್ಟ ಕಾಲ ಘಟ್ಟದ ಮಿತಿಯಲ್ಲಿ ಹೆಚ್ಚು ಬಳಕೆಯಾದ ಪಾತ್ರವೂ ಹೌದು. ಸಾಮಾನ್ಯ 'ಓದುಗರನ್ನು ಪ್ರತಿನಿಧಿಸುವ ದೈನಿಕ ವಾರ, ಮಾಸಿಕ ಪತ್ರಿಕೆಗಳಲ್ಲಿನ ವಾಚಕರ ಪ್ರಶ್ನೆಗಳು–ಉತ್ತರಗಳಲ್ಲಿ
(passing Reference)
ಸಾಮತಿಯರದಲಾದರೂ ಪೌರಾಣಿಕತೆಯ ಅಂಶಗಳು ಕಂಡು ಬರುತ್ತಲೇ ಇರುತ್ತದೆ. ಕಾರಣ ಪುರಾಣಗಳು ಒಂದು ಜನ ಸಮುದಾಯದ ಒಳ ಮನಸ್ಸಿನ ಅಭಿವ್ಯಕ್ತಿಗಳಾಗಿರುತ್ತವೆ. ಅವರ ಆದರ್ಶ ಅಪೇಕ್ಷೆ, ನೀತಿ ಮತ್ತು ಮೌಲ್ಯಗಳನ್ನು ಒಳಗೊಂಡಿರುತ್ತವೆ. ಆದ್ದರಿಂದಲೇ ಒಂದು ಸಮುದಾಯವನ್ನು ಅಧ್ಯಯನಕ್ಕೆ ಗುರಿಪಡಿಸುವಾಗ ಅದರ ಪುರಾಣಗಳನ್ನೂ ನೋಡುವುದು ಅವಶ್ಯ. ಜನ ಸೃಷ್ಟಿಸಿದ ವಸ್ತುಗಳು, ವಾಸ್ತು ರಚನೆಗಳು, ಇನ್ನಿತರ ಸಾಮಗ್ರಿಗಳು ಅವರ ಬದುಕಿನ ಭೌತಿಕ ವಿವರಗಳನ್ನು ಒಳಗೊಂಡಿರುತ್ತವೆ. ಆದರೆ ಇವೆಲ್ಲ ಕ್ಕೂ ಪ್ರೇರಕವಾದ ಭಾವನೆ ಮತ್ತು ನಂಬಿಕೆಗಳ ಚೈತನ್ಯ ಅವರ ಪುರಾಣಗಳಲ್ಲಿ ದೊರೆಯುತ್ತವೆ. ಪುರಾಣಗಳು ಅಂತೂ ಜನವರ್ಗದ ಸೃಜನ ಶೀಲತೆಯ ಆಕರಗಳೂ ಹೌದು. ಶಿಲ್ಪ, ಚಿತ್ರ, ಕಾವ್ಯ ಮುಂತಾದ ಚಟುವಟಿಕೆಗಳ ಮೂಲ ಸಾಮಗ್ರಿ ಪುರಾಣ ಕಥನಗಳೇ ಆಗಿರುವುದನ್ನು ನೋಡಬಹುದು. ಕಾಲಕ್ರಮದಲ್ಲಿ ಜನಸಮುದಾಯವು ತನ್ನ ಪುರಾಣ ಕಥನಗಳನ್ನು ನೋಡುವ ದೃಷ್ಟಿ ಬದಲಾಗುತ್ತ ಹೋಗುತ್ತದೆ. ಈ ಬದಲಾವಣೆಯನ್ನು ಅರಿಯುವ ಮೂಲಕ ಜನ ಸಮುದಾಯದ ಭಾವಲೋಕದಲ್ಲಿ ಆದ ಬದಲಾವಣೆಗಳನ್ನು ಗ್ರಹಿಸುವುದು ಸಾಧ್ಯವಾಗುತ್ತದೆ.

ಈ ಸಂಪ್ರಬಂಧವು ಪುರಾಣ ಮತ್ತು ಸಾಹಿತ್ಯಗಳ ಸಂಬಂಧದ ಸಮಗ್ರ ಅಧ್ಯಯನವಲ್ಲ, ಬದಲಾಗಿ ಕೇವಲ ಕಾವ್ಯ ಪ್ರಕಾರಕ್ಕೂ, ಪುರಾಣಕ್ಕೂ ಇರುವ ಸಂಬಂದದ ಸ್ವರೂಪವನ್ನು ವ್ಯಾಖ್ಯಾನಿಸಲು ಯತ್ನಿಸಿರುವುದಾಗಿದೆ. ಕೆಲವು ಪ್ರಮುಖ ವೆನಿಸುವ ಪೌರಾಣಿಕ ಸೀತೆ, ದ್ರೌಪದಿ, ಶಕುಂತಲೆ, ಕುಂತಿ, ಅಹಲ್ಯೆ, ಇತ್ಯಾದಿ ಸ್ತ್ರೀ ಪಾತ್ರಗಳನ್ನಷ್ಟೆ ಆಯ್ದುಕೊಂಡು ಅವುಗಳನ್ನು ವಿವಿಧ ಕವಿಗಳು ಬಳಸಿಕೊಂಡಿರುವ ರೀತಿ , ಬಳಕೆಯ ರೀತಿಗೂ ಅವರ ಲೋಕದೃಷ್ಟಿಗೂ ಇರುವ ಸಂಬಂಧ , ವಿವಿಧ ಕವಿ ಕೃತಿಗಳಲ್ಲಿ ಪುರಾಣ ಪಾತ್ರಗಳು ಪಡೆದಿರುವ ಭಿನ್ನ ಅರ್ಥವಂತಿಕೆ ಇವುಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಅಧ್ಯಯನವನ್ನು ಪಾತ್ರಕೇಂದ್ರಿತವಾಗಿ ಅಂದರೆ ಒಂದೊಂದು ಪಾತ್ರವನ್ನು ಬೇರೆ ಬೇರೆ ಕವಿಗಳು ನಿರ್ವಹಿಸಿರುವ ರೀತಿಯನ್ನು ಗಮನಿಸುವ ರೀತಿಯಲ್ಲಿ ಕೈಗೊಳ್ಳಲಾಗಿದೆ.

ಅಧ್ಯಾಯ ನಾಲ್ಕು:ಪುರಾಣ ಪಾತ್ರಗಳ ಅಧ್ಯಯನ

ಸೀತೆ

ರಾಮಾಯಣದ ಸೀತೆಯ ಪಾತ್ರ ಎಲ್ಲರಿಗೂ ತಿಳಿದದ್ದೇ, ವೈದಿಕದಲ್ಲಿ ಆದಿಕವಿ ವಾಲ್ಮೀಕಿ,ಸೀತೆಯ ಪಾತ್ರದ ಮೂಲಕ ಹೆಣ್ಣಿನ ಜೀವನದ ಆದರ್ಶವನ್ನು ಪ್ರಪಂಚದ ಮುಂದಿರಿಸಿದ್ದಾನೆ. ನಂತರದ ಬೌದ್ಧ, ಜೈನ, ರಾಮಾಯಣಗಳು ತಮ್ಮ ಮತ ತತ್ವಗಳ ಹಿನ್ನೆಲೆಯಲ್ಲಿನ ಸೀಮಿತ ಕ್ಷೇತ್ರದಲ್ಲಿ ' ಪಾತ್ರ ' ಬೆಳೆಸಿದ್ದಾರೆ. ಕನ್ನಡ ರಾಮಾಯಣಗಳಲ್ಲಿ 10ನೇ ಶತಮಾನದ ಚಾವುಂಡರಾಯನ ಪುರಾಣ , 12ನೇ ಶತಮಾನದ ಪಂಪರಾಮಾಯಣ, 13ರ ಕುಮುದೇಂದು ರಾಮಾಯಣ, 16 ರ ತೊರವೆ ರಾಮಾಯಣ ಇತ್ಯಾದಿಗಳೆಲ್ಲಾ ಸೀತೆಯ ವಿಚಾರದಲ್ಲಿ ವ್ಯತ್ಯಾಸ ಮಾಡದಿದ್ದರೂ, ತಮ್ಮ ತಮ್ಮ ಧರ್ಮದೃಷ್ಟಿ, ಪಾಂಡಿತ್ಯಕ್ಕೆ ಅನುಗುಣವಾಗಿ, ಛಂದಸ್ಸು, ಉಪಮೆ, ರೂಪಕಗಳನ್ನು ಬದಲಾಯಿಸಿ ಹೊಸ ಹೊಸ ಮಾತುಗಳನ್ನು ಹೆಣೆದಿದ್ದಾರೆ. 16 ನೇ ಶತಮಾನದ ಜೈಮಿನಿ ಭಾರತ ಉತ್ತರ ಕಾಂಡದ ಕಥೆಯನ್ನು ಹೇಳುವ ಕನ್ನಡದ ಮೊದಲ ಕೃತಿ. ಲಕ್ಷ್ಮೀಶನ ' ಭೂಮಿಯ ಮಡಿಲನ್ನು ಹೊಗುವ ಸೀತೆ ' ಯ ಬಗೆಗೆ ವಿ.ಸೀತಾರಾಮಯ್ಯನವರು ಹೀಗೆ ಅಭಿಪ್ರಾಯಪಟ್ಟಿದ್ದಾರೆ.

'' ರಾವಣನಿಚ್ಛೆಯಂತೆ ಉಯ್ಯಾಲೆಯಲ್ಲಿ ಮೇಲೇರಿ ಕೆಳಗೆ ಬೀಳುತ್ತಿರುವುದಕ್ಕಿಂತ ಭೂತಾಯಿಯ ಮಡಿಲನ್ನು ಸೇರುವ ಸೀತೆ ಹಿರಿಯಳೂ, ಸ್ವಾಭಿಮಾನಿಯೂ ಸಹನಾ ಮೂರ್ತಿಯೂ ಆಗಿ ಕಾಣುತ್ತಾಳೆ.''. (ವಿ.ಸೀ., ಲಕ್ಷ್ಮೀಶ–1978, ಪುಟ 211)

ಇದು ಸೀತೆಯ ಪಾತ್ರದಲ್ಲಿನ ಮೂಲ ಬದಲಾವಣೆ. 19ನೆ ಶತಮಾನದಲ್ಲಿಸ್ವೋಪಜ್ಞತೆಯನ್ನು ಮೆರೆದಿರುವ ಮುದ್ದಣ, ರಾಮಾಶ್ವಮೇಧದಲ್ಲಿ ಮನೋರಮೆಯಿಂದ ಹಲವಾರು ಘಟನೆಗಳಿಗೆ ವಿಮರ್ಶೆಯ ಕಿಡಿನುಡಿಗಳನೆಸೆದು, ಹೆಣ್ಣಿನ ಹೃದಯದ , ಅಂತರ್ಯದ ವಿಚಾರಗಳ ಹೊಸ ಸೃಷ್ಟಿಯನ್ನು ಕೊಟ್ಟಿದ್ದಾನೆ.

ಇದೇ ಶತಮಾನದ, ಕುವೆಂಪುರವರ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯದಲ್ಲಿ '' ಪುರಾಣ ಮಾನವ ಮತ್ತು ಆಧುನಿಕ ಮಾನವ ಎರಡೂ ಆಗಿದ್ದು, ಭವಿಷ್ಯದ ಅತಿ ಮಾನವದತ್ತ ಮುಖ ಮಾಡಿರುವುದು ಕಂಡು ಬರುತ್ತದೆ.'' (ಅವಲೋಕನ, ಶ್ರೀ ಕೃಷ್ಣ ಆಲನಹಳ್ಳಿ, ಜ್ಞಾನಪೀಠ ಪ್ರಶಸ್ತಿಯ ಉಲ್ಲೇಖ, 1969.) ಇಲ್ಲಿನ ಸೀತೆ, ಕುವೆಂಪುರವರೇ ಹೇಳುವಂತೆ ' ಪ್ರಕೃತಿ ರೂಪಿಣಿ ಚರಾಚರಾತ್ಮಕ ವಸ್ತುವಿನ ಚೈತನ್ಯ ಶಕ್ತಿ, ತ್ರೈ ಭುವನ ಲಕ್ಷ್ಮಿ'. ಇವೆಲ್ಲಾ ಸಾಂಪ್ರದಾಯಿಕ ಲೇಪವನ್ನು ಉಳಿಸಿಕೊಂಡು ಅಲ್ಲಲ್ಲಿ ಹೊಸ ವಿಚಾರದ ಬದಲಾವಣೆಯನ್ನು ಲೇಪಿಸಿಕೊಂಡು ಬೆಳೆದ ಮಹಾಕಾವ್ಯಗಳು, ಇವುಗಳ ಅಧ್ಯಯನವನ್ನು ಮಾಡಿರುವ ಡಾ: ಮಂದಾಕಿನಿ ಭೀಮಸೇನ ರಾವ್ ತವದ ರವರು ಕವಿ, ಕಾವ್ಯಗಳ ವೈಶಿಷ್ಟ್ಯತೆ, ಹೊಸ ಅಂಶಗಳನ್ನು ಗುರುತಿಸುತ್ತಲೇ, ಸಾಹಿತ್ಯ, ಕಲೆಗಳೆಲ್ಲಾ ಮಾನವ ಜೀವನದ ಅಭಿವ್ಯಕ್ತಿ ಹಾಗೂ ವ್ಯಾಖ್ಯಾನವೆಂಬ ವಿಚಾರಕ್ಕನುಗುಣವಾಗಿ, ಯಾವುದೇ ಅಧ್ಯಯನ ಅಥವಾ ಸಾಹಿತ್ಯ ಸೃಷ್ಟಿಯ ಉದ್ದೇಶ, ಪರ್ಯಾಯವಾಗಿ ಮಾನವ ಜೀವನದ ವಿಕಾಸವೇ ಆಗಿರಬೇಕಾದುದು ಮಾನವ ಸಂಸ್ಕೃತಿಯ ಬೆಳವಣಿಗೆಗೆ ಅಗತ್ಯವಾದುದು '' ಎಂಬಂಶವನ್ನು ಗಮನದಲ್ಲಿ ಇರಿಸಿಕೊಂಡು ' ಕನ್ನಡ ಮಹಾಕಾವ್ಯಗಳಲ್ಲಿ ಸೀತೆಯ ಪಾತ್ರ ' ಎಂಬ ಕೃತಿಯಲ್ಲಿ ಅಧ್ಯಯನ ಹಾಗೂ ಜೀವನಾನುಭವದಿಂದ ಸ್ತ್ರೀ ಜೀವನಕ್ಕೆ ಸಂಬಂಧಿಸಿದ ಕೆಲವು ಅಂಶಗಳನ್ನು ಹೊಳೆಯುರಿಸಿರುವುದಾಗಿ ಸ್ಪಷ್ಟಪಡಿಸಿಕೊಂಡಿದ್ದಾರೆ.

1) ಪಾತಿವ್ರತ್ಯವೊಂದು ಎಂದೆಂದಿಗೂ ಮಾನದ ಸ್ತ್ರೀ ಧರ್ಮ, ಕುಟುಂಬ ವ್ಯವಸ್ಥೆಗೆ ಅಗತ್ಯವಾದ ಅಂಶ.

2) ವಾಲ್ಮೀಕಿಗಿಂತ ಮುಂಚಿನಿಂದಲೂ, ಅಷ್ಟೇಕೆ ರಾಮಕಥೆ ಹುಟ್ಟಿದಾಗಿನಿಂದಲೂ,

ಭಾರತೀಯರು ಇದನ್ನು ನಂಬಿದ್ದಾರೆ. ಕನ್ನಡ ಕವಿಗಳೂ ಈ ಗುಣವನ್ನೇ ಎತ್ತಿ ಹಿಡಿದಿದ್ದಾರೆ.

3) ಇಂದಿನ ವಿಜ್ಞಾನ ಯುಗದಲ್ಲೂ ಹೆಣ್ಣಿನ ವ್ಯಕ್ತಿತ್ವದ ದೃಷ್ಟಿಯಿಂದ ಪಾತಿವ್ರತ್ಯವೇ ಶ್ರೇಷ್ಠ ಭೂಷಣ ಮತ್ತು ಮೌಲ್ಯವಾಗಿದೆ.

4) ಕುವೆಂಪು ಅವರು ಸೀತೆಯ ಪಾತ್ರ ನಿರೂಪಣೆಯಲ್ಲಿ ಇದನ್ನು ಸಾಧ್ಯವಾಗಿ ಮಾಡಿ ತೋರಿಸಿದ್ದಾರೆ. ಪತಿವ್ರತಾಚರಣೆಯಿಂದ ಹೆಣ್ಣಿನಲ್ಲಿ ಆತ್ಮ ವಿಶ್ವಾಸ ಬೆಳೆದು ದಾರಿತಪ್ಪಿದ ಗಂಡನನ್ನು ಸನ್ಮಾರ್ಗಕ್ಕೆ ಹಚ್ಚುವ ಉನ್ನತ ಶಕ್ತಿಯೂ ಬರುತ್ತವೆ ಎಂಬುದನ್ನು ಸಿದ್ಧಮಾಡಿ ತೋರಿಸಿದ್ದಾರೆ. (ಮಂದಾಕಿನಿ ಮಹಾ ಭೀಮಸೇನರಾವ ತವಗ, ಕನ್ನಡ ಕಾವ್ಯಗಳಲ್ಲಿ ಸೀತೆಯ ಪಾತ್ರ, 1995.)

ಇಂಥ ಮೌಲ್ಯಗಳು ಎಷ್ಟು ಗಟ್ಟಿಯಾದವು ಎಂಬುದನ್ನು ಇಂದಿನ ಶಿಕ್ಷಣದ ಹೊಸ ವಿಚಾರ ಕ್ರಮ ನಿರ್ಧರಿಸಿದೆ. ಒಳ್ಳೆಯ ಪತಿವ್ರತೆಯರನ್ನು ಗೃಹಿಣಿಯರನ್ನೂ ತಯಾರಿಸಲೂ ಹೊರಟ ಶಿಕ್ಷಣ ಈ 'ಪಾತಿವ್ರತ್ಯ' 'ಗೃಹಿಣೀತ್ವ' ಗಳನ್ನು ಪ್ರಶ್ನಿಸುವ ಹಂತಕ್ಕೆ ತಲುಪಿದೆ'' (ವಿಜಯ ದಬ್ಬೆ , ಮಹಿಳೆ ಸಾಹಿತ್ಯ ಸಮಾಜ, 1989, ಪುಟ ಸಂಖ್ಯೆ 17.) ಪರಂಪರಾಗತ ಮೌಲ್ಯಗಳ ಸಾಕಾರವಾಗಿರುವ ಪುರಾಣೇತಿಹಾಸಗಳ ಸ್ತ್ರೀ ಮಾದರಿಗಳು ಇಂದು ಮಾದರಿಗಳಾಗಿಲ್ಲ. ಬದಲಿಗೆ ಅವು '' ಶಾಪವಾಗಿವೆ ಸ್ತ್ರೀ ಕುಲಕೆ,'' (ಕವಿತೆ -'ಸುಳ್ಳಿನಾಚೆಯ ಸತ್ಯ', ಭಾಗ್ಯ, 1982) ಅಭಿಪ್ರಾಯವನ್ನು ಬೆಳೆಸದೆ ಈ ಪುರಾಣ ಧೋರಣೆಯನ್ನು ಭಂಜಿಸಿ ತನ್ನ ಸುತ್ತಮುತ್ತಲಿನ ಸ್ಥಾಪಿತ ಮೌಲ್ಯಗಳನ್ನು, ನಿಜವಾಗದ ನಿಜಗಳನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾ, ಪುರಾಣದ ಮಾದರಿ ಪಾತ್ರಗಳನ್ನು ಸಮಕಾಲೀನದ ಪ್ರತಿನಿಧಿಯಾಗಿ ಇರಿಸಿಕೊಂಡು, ನಡವಳಿಕೆಯನ್ನು ಪ್ರಶ್ನಿಸುವ, ವ್ಯವಸ್ಥೆಗೆ ಸವಾಲೆಸೆಯುವ, ಮಾದರಿಗಳನ್ನೂ ಪುನಾ ರಚಿಸುವ ಪ್ರಕ್ರಿಯೆ ಹಲವು ಬಗೆಗಳಲ್ಲಿ ಕಾಣಬರುತ್ತದೆ.

ಭಾರತೀಯ ಸಾಂಸ್ಕೃತಿಕ ಪರಂಪರೆಯ ಪೌರಾಣಿಕ ಪಾತ್ರಗಳಲ್ಲಿ 'ಆದರ್ಶ' ಪಾತ್ರವೊಂದೆಂದು ಚಿತ್ರಿಸಲ್ಪಟ್ಟಿರುವ ಸೀತೆಯ ಪಾತ್ರ ಈಗಾಗಲೇ ಹಲವಾರು ಪಂಡಿತರ ಚಿಂತಕರ, ಚಿಂತನೆ ಜಿಜ್ಞಾಸೆಗಳಿಗೆ ಒಳಗಾಗಿದೆ. ಆಧುನಿಕ ಕನ್ನಡದಲ್ಲಿ ಸೀತೆಯನ್ನು ಶಿಲ್ಪಿಸುವ ಕವಿತೆಗಳಲ್ಲಿ ವೈದೇಹಿಯವರ 'ಸೀತೆಯಕತೆ' ಹನಿಗವನವಾದರೂ HONEY ಕವನವಾಗಿದೆ.

'ಕಾಡಿನಲಿ ಕೃಶಾಂಗಿ ರಾಮನರ್ಧಾಂಗಿ
ವಾಲ್ಮೀಕಿಯಿಲ್ಲ
ಅಗ್ನಿದೇವನ ಪತ್ನಿಯಲ್ಲ
ಭೂಮಾತೆಯ ಮಗಳಾಗಿ
ರಾಮನಿಗೆ ಹೃದಯವಿಲ್ಲ.'

ಕಾಡಿನಲ್ಲಿ ಕೃಶಾಂಗಿ ಇರುವಾಗ ವಾಲ್ಮೀಕಿ ಇರಲಿಲ್ಲ. ಯಾವುದೋ ಕಾಲದಲ್ಲಿ ಬಂದ ವಾಲ್ಮೀಕಿ ಬರೆದ ರಾಮಾಯಣದ 'ಸೀತೆಯಕತೆ' ಇಲ್ಲಿ ಹರಳುಗಟ್ಟಿದೆ. ಅರ್ಧನಾರೀಶ್ವರರ ಕಲ್ಪನೆಯಲ್ಲಿ ಎಡ ಅರ್ಧದಲ್ಲಿ ನಿಲ್ಲುವ ರಾಮನರ್ಧಾಂಗಿ ಸೀತೆಯ ಪಾಲಿಗೆ ಹೃದಯವಿದೆ. ರಾಮನಿಗೆ ಹೃದಯವಿಲ್ಲ . ಇದನ್ನು ಸಮ ಕಾಲೀನ ಸಂದರ್ಭಗಳಲ್ಲಿಯೂ ಅನ್ವಯಿಸಬಹುದು. ರಾಮಾಯಣಕ್ಕೆ ವೈದೇಹಿ ಯವರ ವಿಮರ್ಶೆಯ ಮಿಂಚಿನೆಳೆ ಇಲ್ಲಿದೆ.

— — —

ವಿಜಯಾ ದಬ್ಬೆಯವರ ಸೀತೆಯನ್ನು ಕುರಿತ 'ಪರಂಪರೆ' ಎರಡು ಭಿನ್ನ ವೈಚಾರಿಕ ನೆಲೆಯಲ್ಲಿ ನಿಲ್ಲುತ್ತದೆ.

'......... ಒಪ್ಪಿಸಬಹುದೇ
ನಮ್ಮೆಲ್ಲ ಭೂತ ವರ್ತಮಾನದ
ಸತ್ಯವನ್ನು ?'

'ಕಾದ ಮೌಲ್ಯಗಳು
ಅಪಶಂಕೆಯ ಬೆಂಕಿಯಲ್ಲಿ
ಸೀದು ಕರಕಾಗುವಾಗ
ಹೇಗೆ ನುಂಗಿದೆ ?'

'ಈ ನಾಲಗೆ ನೋಟದ
ಬೆಂಕಿಗೆ
ಇದು ಈಡೇ ?'

' ...... ಮಡಿಲಲ್ಲಿ ಮಲಗಿ
ಮತ್ತೆ ಕೇಳುತ್ತೇನೆ
ಈ ಎಲ್ಲ ಶಿಕ್ಷೆ ಯಾತಕಾಗಿ ? '

ಇಲ್ಲಿ ಗಮನಿಸಲಾಗಿರುವ ಕವಿತೆಯ ಸಾಲುಗಳು ಸೀತೆಯ ಬದುಕಿನ ವಿವಿಧ ಘಟನೆಗಳನ್ನು ಪ್ರಸ್ತುತ ಬದುಕಿನ ಸ್ಥಿತಿಗಳಿಗೆ ಎಳೆತಂದು ಕೇಳುವ ಪ್ರಶ್ನೆಗಳಲ್ಲಿ ನೋವನ್ನು ನುಂಗಿದ, ಸಹಿಸಿದ, ಮನಸ್ಸಿನ ದೃಢತೆಯನ್ನು ಮೆಚ್ಚುವ ಮುಗ್ಧ ಭಾವುಕ ಮನಸ್ಸಿನ ಪ್ರತಿಬಿಂಬವಿದೆ. ಇನ್ನೊಂದು ನೆಲೆಯಲ್ಲಿ, ' ನಮ್ಮೆಲ್ಲ ಭೂತ ವರ್ತಮಾನದ ಸತ್ಯವನ್ನು ತೋರಿಸಿ ಒಪ್ಪಿಸಬಹುದೆ ? ' ಎನ್ನುವಾಗ ನೋವಿನ ಎಳೆಯೂ, ಸಿಡಿಯುವ ಮನವೂ ಏಕ ಕಾಲದಲ್ಲಿ ಪ್ರತಿಧ್ವನಿತವಾಗುತ್ತದೆ. ' ಈ ಎಲ್ಲ ಶಿಕ್ಷೆಯಾತಕಾಗಿ ? ' ಎಂದು ಕೇಳುವಾಗ ಕಾದ ಮೌಲ್ಯಗಳ ವಿರುದ್ಧ ಪ್ರತಿಭಟನೆಯ ಸ್ಪಷ್ಟ ಧ್ವನಿಯೂ ಕೇಳಿಸುತ್ತದೆ. ಈ ಕವಿಯದೇ ಇನ್ನೊಂದು ಪದ್ಯ ' ತಿರುಗಿನಿಂತ ಪ್ರಶ್ನೆ ' ಯಲ್ಲಿ ಕೇಳುವ ' ಯಾಕೆ ಸುಮ್ಮನೆ ಕುಳಿತೆ ಸೀತೆ ನೀನು ? ' ಕೇವಲ ಸೀತೆಗಷ್ಟೇ ಅಲ್ಲ, ಎಲ್ಲ ಮಹಿಳೆಯರ ಸವಾಲಾಗುತ್ತದೆ.

' ಜನಕ ಕಲಿಸಿದ ಅಕ್ಷರವಿತ್ತು
ಕೈತುಂಬ ಬಿಡುವಿತ್ತು
ಹರಿದುಹೋದ ಇಡೀ ಜೀವನವಿತ್ತು '

ಆದರೂ ಸುಮ್ಮನೆ ಕುಳಿತದ್ದು ಯಾಕೆ ಎನ್ನುವ ಪ್ರಶ್ನೆಗಳಿಗೆಲ್ಲ ' ಅನಳ ಭೂಮಿ ತೂಕದ ಮೌನವೇ ' ಅನೇಕ ಭಾವನೆಗಳ ಉತ್ತರವನ್ನು ಹೊಳೆಯಿಸುತ್ತದೆ. ಮಹಿಳೆಯರಿಂದ ಸಾಹಿತ್ಯ ರಚನೆಯಾಗದಿರುವ ಬಗ್ಗೆ ಎತ್ತುವ ಪ್ರಶ್ನೆಯಂತೆ ಇರುವ ಈ ಕವಿತೆಯಲ್ಲಿ ' ಅವಳ ಕಣ್ಣಭಾವಗಳು ಶಬ್ದವಾಗದೆ ಕಣ್ಣಿಗಿಳಿಯುವ ಚಿತ್ರಣ ಇಡೀ ಸಾಹಿತ್ಯದ ಚಾರಿತ್ರಿಕ ಪರಂಪರೆಗೆ ಉತ್ತರವೆನಿಸುತ್ತದೆ.

— — —

ಬಿ.ಟಿ.ಲಲಿತಾನಾಯಕರ ' ಇದೇ ಕೂಗು ಮತ್ತೆ ಮತ್ತೆ ' ಎಂಬ ಕವನ ಸೀತೆಯನ್ನು ಸಮಕಾಲೀನ ಸಮಾಜದ ಸಮಸ್ಯೆಗಳೊಂದಾದ, ಸ್ತ್ರೀಯನ್ನು ವಸ್ತುವಾಗಿ ಪರಿಗಣಿಸುವ ಧೋರಣೆಯ ವಿರುದ್ಧ ವ್ಯಂಗ್ಯವಾದ ಪ್ರತಿಭಟನೆಯನ್ನು ಧ್ವನಿಸುತ್ತದೆ. ಸೀತೆಯನ್ನು ತತ್ಕಾಲೀನಕ್ಕೆ ಎಳೆತರುವ ದಾರಿ ಹೀಗಿದೆ.

" ಈಗಲೂ ಇಲ್ಲ ಅದೇ ಕಥೆ
ನಡೆದಿದೆ ಸೀತೆ
ಬದಲೇನಾದರೂ ಆಗಿದ್ದರೆ
' ಸೀ ' ಬದಲು ' ಗೀ ' ಎಂಬುದಷ್ಟೆ "

— — —

ಚಂಪಾರ ' ಸೀತಾರಾಮಾಯಣದಲ್ಲಿ ' ಬರುವ ಕವನದ ಒಟ್ಟಂಶ ಮೇಲ್ನೋಟಕ್ಕೆ ಸೀತಾರಾಮಾಯಣದ ವೈಚಾರಿಕ ನೆಲೆಯಿಂದ ಪ್ರಭಾವಿತವಾದಂತಿದೆ. ಲಕ್ಷ್ಮಣ ಮತ್ತು ಸೀತೆಯರ ನಡುವಿನ ಸಂಬಂಧದ ಬಗೆಗಿರುವ ಸಂಶಯವೇ ವಸ್ತು.

— — —

ಮೈಸೂರು ಮಲ್ಲಿಗೆಯ ಕೆ.ಎನ್.ನರಸಿಂಹಸ್ವಾಮಿಯವರು ಸೀತೆಯ ಪುಣ್ಯ, ಸೀತೆಯ ಸಂದೇಶ, ಸೀತೆಯ ಭಾಗ್ಯ, ಎಂಬ ಸೀತೆಯನ್ನು ಕುರಿತ ಕವಿತೆಗಳನ್ನು ಬರೆದಿದ್ದಾರೆ. ಮೊದಲ ಎರಡು ಕವಿತೆಗಳು ರಾಮಾಯಣದ ಕಥೆಯನ್ನು ಸರಳೀಕರಿಸಿ ಹೇಳುವ ಕಥನಾತ್ಮಕ ಲಕ್ಷಣ ಹೊಂದಿವೆ. ' ಸೀತೆಯ ಭಾಗ್ಯ ' ದಲ್ಲಿ

'.......... ರಾಮಾಯಣದ
ಅಂತಿಮವೇ ಒಂದು ಅನ್ಯಾಯ ಸೀತೆಯಕಥೆಗೆ'

'.......... ಸಾವಿರರಾಮ
ತೂಗುವರೆ ಇವಳ ತೂಕಕ್ಕೆ ? .....'

' ...... ಗಂಡಿಗೆ ಬಂದ ಸಂಶಯವೆ
ಹೆಣ್ಣಿಗೂ ಬಂದು, ಒಂದೇ ಮಾತನಾಡಿದಳೇ ? '

ಈ ಸಾಲು ಉದಾರೀಕರಣದ ಸಮಾನತೆಯ ವೈಚಾರಿಕ ನೆಲೆಯಲ್ಲಿ ವಿಚಾರಮಾಡಿಸುತ್ತಾ ' ಸಂಶಯದ 'ಒರೆಗಣ್ಣಿನಲ್ಲಿ ನೋಡಿದ ' ದೃಷ್ಟಿಗೆ ತಿರಸ್ಕಾರದ ಭಾವವನ್ನೀಯುತ್ತಾರೆ.

— — —

ಆಧುನಿಕ ಕನ್ನಡದ ಕವಯಿತಿಯೊಬ್ಬರು ಎಂ.ಎನ್. ಮಂದಣ್ಣ, ' ಹೆಣ್ಣಿನ ಅಪವಾದ ' ಎಂಬ ಕವಿತೆಯಲ್ಲಿ ರಾಮಾಯಣದ ಅಗಸನಂತೆ ಸಂಶಯದ ಮಾತುಗಳನ್ನು ಬಿತ್ತುವ ಕುಟುಕರು ಈಗಿನ ಕಾಲದಲ್ಲಿಯೂ ಓಣಿಗೊಬ್ಬರು ಸಿಗುತ್ತಾರೆಂದು ಹೇಳುತ್ತಾ ಅಂತಹವರ ವಿರುದ್ಧ ತೀವ್ರವಾದ ಪ್ರತಿಭಟನೆ ವ್ಯಕ್ತಪಡಿಸುತ್ತಾರೆ.

— — —

ಇಷ್ಟೆಲ್ಲಾ ರಾಮಾಯಣದ ಘಟನೆಗಳನ್ನು ತಮ್ಮ ಜೀವನಾನುಭವವನ್ನೂ ಹೋಲಿಸಿ ತಮ್ಮ ದೃಷ್ಟಿಯಲ್ಲಿ ನಿಲ್ಲುವ ಸೀತೆಯನ್ನು ಹೊಗಳುತ್ತಲೋ, ಕನಿಕರಿಸುತ್ತಲೋ

ಅಥವಾ ಸೀತೆಯನ್ನು ಸಂಶಯಿಸುವ ಕವಿಗಳಿದ್ದಂತೆಯೇ, ಅದೇ ಸೀತೆಯನ್ನು ಬಳಸಿಕೊಂಡು ಸಮಕಾಲೀನ ಸಮಾಜದ ಸ್ತ್ರೀಯರ ಸಮಸ್ಯೆಗೆ, ವ್ಯವಸ್ಥೆಯ ವಿರೋಧಕ್ಕೆ ಅಭಿವ್ಯಕ್ತಿಯನ್ನಾಗಿಸಿಕೊಂಡ ಕವಿತೆಗಳು ಸಾಕ್ಷ್ಯತೆಯನ್ನು ಧ್ವನಿಸುವಲ್ಲಿ ಮುಖ್ಯವೆನಿಸುತ್ತದೆ.

ದ್ರೌಪದಿ

ಮಹಾಭಾರತದ ನಾಯಕಿಯಾಗಿರುವ ದ್ರೌಪದಿಯೂ ಕೂಡ ಕನ್ನಡದ ಸಾಹಿತ್ಯದ ನಾನಾ ಕೃತಿಗಳಲ್ಲಿ ಸೃಷ್ಟಿ ಮರು ಸೃಷ್ಟಿ ಪಡೆಯುತ್ತ ಬಂದಿದ್ದಾಳೆ. ಆದಿ ಕವಿ ಪಂಪನ 'ವಿಕ್ರಮಾರ್ಜುನ ವಿಜಯದಲ್ಲಿ' ಪಾಂಚಾಲಿಯು ಪಟ್ಟಮಹಿಷಿಯ ಪದವಿಯಿಂದ ದೂರಳಾಗಿದ್ದರೆ, ರನ್ನಕವಿಯ ಸಾಹಸಭೀಮ ವಿಜಯದಲ್ಲಿ ಭೀಮನೊಡನೆ ಪಟ್ಟದ ರಾಣಿಯಾಗಿ ದ್ರೌಪದಿ ಗಮನಾರ್ಹ ವ್ಯಕ್ತಿಯಾಗಿ ಕಾಣಿಸಿಕೊಳ್ಳುತ್ತಾಳೆ. ಕುಮಾರವ್ಯಾಸನ 'ಕರ್ನಾಟಕ ಭಾರತ ಕಥಾಮಂಜರಿಯಲ್ಲಿ'. ದ್ರೌಪದಿ ಪ್ರಮುಖ ಪಾತ್ರದಾಗಿ ರಚಿತಗೊಳ್ಳುತ್ತಾಳೆ.

ಹಿಮಾಲಯದ ತಪ್ಪಲಿನ ಕೆಲವು ಹಳ್ಳಿಗಳಲ್ಲಿ ಈಗಲೂ ಬಹುಪತಿತ್ವ ರೂಢಿಯಲ್ಲಿದೆ ಎಂದು ಹೇಳಲಾಗುತ್ತದೆ. ಐವರು ಗಂಡಂದಿರನ್ನು ಪಡೆದ ವಿಶಿಷ್ಟ ವ್ಯಕ್ತಿತ್ವವುಳ್ಳವಳಾಗಿ ದ್ರೌಪದಿ ಚಿತ್ರಿತಳಾಗಿದ್ದರೂ ಕೂಡ ಪ್ರಾಚೀನ ಭಾರತದಿಂದ ಆಧುನಿಕ ಭಾರತದ-ವರೆಗೆ ಎಲ್ಲಿಯೂ ಒಪ್ಪಿತಳಾಗಿಯೇ ಉಳಿಯುತ್ತಾಳೆ. ವ್ಯಕ್ತಿ ವಿಶಿಷ್ಟತೆಯಿಂದ ಮೂಡುವ ದ್ರೌಪದಿಯನ್ನು ಆಧುನಿಕ ಕನ್ನಡ ಕವಿತೆಗಳು ಹೇಗೆ ಅರ್ಥೈಸಿಕೊಂಡಿವೆ ಎಂಬುದನ್ನು ಗಮನಿಸೋಣ.

ಮೊದಲಿಗೆ ಸುಧಾಶರ್ಮಾ ಚವತ್ತಿಯವರ 'ದ್ರೌಪದಿ' ಎಂಬ ಕವನ ದ್ರೌಪದಿಯ ಇಡೀ ಜೀವನವನ್ನು ಮುಪ್ಪಿನಲ್ಲಿ ನಿಂತು ನೋಡಿ ಹೇಳುವ ಸ್ವಗತವಾಗಿದೆ.

ಮಹಾಭಾರತವನ್ನು ಆಕೆಯ ದೃಷ್ಟಿ ಕೋನದಿಂದ ನೋಡುವಲ್ಲಿ ಸಫಲವಾಗಿದೆ.

' ಕೈಯಲ್ಲಿ ಹಿಡಿದ ಮಾಲೆಯಿಂದ
ಹೊರಟ ಗಂಧದಂತೆ
ನನ್ನ ಯೌವ್ವನ ' ಎನ್ನುವ ಅಗ್ನಿಕನ್ಯೆ,

' ಅಂಗೈಯ ಬೆರಳೊಳಗಿನ
ಬಿರುಕಿನಲ್ಲಿ ನಾನು
ನೀರಿನ ಹಾಗೆ ಸೋರಿಹೋದೆ ' ಎನ್ನುವ ಷ್ಟರಲ್ಲಿ ಕಳೆದ

ಯೌವ್ವನದ ಎಲ್ಲ ಭಾವನೆಗಳನ್ನೂ ಮತ್ತು ಪಾಂಡವರ , ಕೌರವರ, ಕರ್ಣನ ನಡುವಿನ ಎಳೆಗಳನ್ನು ಬಿಡಿಬಿಡಿಸಿ ತೋರಿಸುತ್ತಾಳೆ. ಹಾಗೂ ಪಂಚಮರ ನಡುವಿನ ಪ್ರೇಮದ ವೈಫಲ್ಯತೆ ಅವಳ ವಿಷಾದವಿದ್ದೆ. ಗಂಡಂದಿರ ಶೌರ್ಯ, ಪ್ರತಿಷ್ಠೆ, ವೈಭವಗಳಲ್ಲಿ ವಿಜೃಂಭಿಸಿದವಳಿಗೆ ಕಡೆಯ ಕಾಲದಲ್ಲಿ ಯಾವ ಅನುಭವಗಳೂ ಸಂತೃಪ್ತಿ ತಾರದೆ, ಮುಪ್ಪಿನಲ್ಲಿ ಉಳಿಯದೆ, ಚೆಲ್ಲಿಹೋದಂತೆ ಎನ್ನಿಸುತ್ತದೆ.

'' ನಿಮಗೆ ಮುಷ್ಟಿಯಷ್ಟು ತೋರಿಸೋಣವೆಂದರೂ
'ಏನೂ ಇಲ್ಲಾ ನೋಡಿ ''

ಮಾನಹಾನಿಯ ಪ್ರಸಂಗದ ತನ್ನ ಮನದ ಜ್ವಾಲೆ ಅಸಹಾಯಕತೆಗಳ ನಡುವೆಯೂ ಗಂಡಂದಿರೆಡೆಗೆ ತೀಕ್ಷ್ಣದೃಷ್ಟಿಯ ವಿಮರ್ಶೆ ಮಾಡುವುದನ್ನು ನೋಡಬಹುದು.

' ಕೃಷ್ಣ ಕಾಪಾಡಿದ್ದು ದ್ರೌಪದಿಯ ಮಾನವೆ ?
ಇಲ್ಲ
ಪರಾಕ್ರಮಿ ಪಾಂಡವರದ್ದೋ ? '

ಎಂಬ ಸಾಲುಗಳು ಮಹಾಭಾರತ ಕಾರರನ್ನೇ 'ಒರೆ ಹಚ್ಚುವ ದ್ರೌಪದಿಯ ಕಿಡಿನುಡಿಯಂತಿದೆ.

ಅಗ್ನಿಕನ್ಯೆಯು' ಕಿಡಿ ಉದುರಿಸಿದ ಕಣ್ಣಲ್ಲೀಗ
ಹುಂಡಾಡುವ ನೀರು
ಅಗ್ನಿಕುಂಡದ ಎದೆಯೆಂಬ
ಹಿಮದುಂಡೆ
ಭಾವಗಳು ಸತ್ತುಬಂಡೆ ' ಎನ್ನುವಾಗ ತನ್ನ ಜೀವನದ ಅಗಾಧ

ಹೋರಾಟ ಅನುಭವಗಳು ವ್ಯರ್ಥವಾಗಿರುವಂತೆ ಭಾವಿಸುತ್ತಾಳೆ.

* * * *

ಇದೇ ನಿಟ್ಟಿನಲ್ಲಿ ಬೆಳೆದು ಬರುವ ಪ್ರತಿಭಾನಂದ ಕುಮಾರ ಅವರ 'ನತ್ತು '
ಎಂಬ ಕವಿತೆ ದ್ರೌಪದಿಯ ಮೂಗುತಿಯನ್ನು ಸಾಂಕೇತಿಕವಾಗಿ ಮಾಡಿಕೊಂಡು

ಆಕೆಯ ಜೀವನದ 'ಏಳುಬೀಳುಗಳಿಗೆಲ್ಲ ಬೆಳಕು ಹೊಳೆಯಿಸುತ್ತದೆ. ಪ್ರತಿಕಾರದ ಪ್ರತಿಜ್ಞೆಗಾಗಿ ಮುಡಿ ಕೆದರಿದಾಗ, ಇದ್ದ ಮೂಗುತಿಯ ಮಿಂಚು ಸಂತೃಪ್ತಿಯ ಹೊಳಪು ಪ್ರತಿಜ್ಞೆ ಪೂರೈಸಿದಾಗ ಇಲ್ಲವಾಗುತ್ತದೆ.

'ಐವರೆದೆಗೊರಗಿದಮುಡಿ ಕೆದರಿ
ಸಿಕ್ಕುಸಿಕ್ಕಾಗಿ ಹೇಗೆಂದರೆ ಹಾಗೆ ಹಾರಾಡುತ್ತಿರುವಾಗ
ನಿನ್ನ ಮೂಗು ನತ್ತು ಮಾತ್ರ ಹೇಗೆ ಮಿಂಚುತ್ತಿತ್ತು
ಕಣ್ಣಲ್ಲಿ ಸಂತೃಪ್ತಿ ಹೊಳೆಯುತ್ತಿತ್ತು'.

"ಏಳುಬೀಳುಗಳೆಲ್ಲ ದಾಟಿ ಕೊನೆಗೆ
ನೀಗೆದ್ದು ಗದ್ದುಗೆಯನೇರಿ ರಾರಾಜಿಸುತ್ತಿರಲು
ಈಗ ನತ್ತಿನ ಕಟ್ಟಡ ಸಡಿಲಿ ಮುತ್ತು
ಕಳಚಿ ಬಿತ್ತೆಂದು ಹಳಹಳಿಸುತ್ತ
ಇಲ್ಲೇನು ಹುಡುಕುತ್ತಿಯೇ ದ್ರೌಪದಿ ?".

(ನತ್ತು – ಪ್ರತಿಭಾ)

ಇಲ್ಲಿ ಕವಿ ದ್ರೌಪದಿಯ ಜೀವನಾನುಭವ ಸಾರ ಎಲ್ಲಿದೆಯೆಂಬ ಪ್ರಶ್ನೆಯೆತ್ತಿದ್ದಾರೆ. ಸುಧಾ ಚವತ್ತಿಯವರ ದ್ರೌಪದಿಯು ಸ್ವಗತವಾಗಿ ಜೀವನವನ್ನು ವಿಮರ್ಶೆಗೊಳಪಡಿಸಿದರೆ, ಪ್ರತಿಭಾರ 'ನತ್ತು' ದ್ರೌಪದಿಯ ಜೀವನದೊಳಗಿನ ಮೌಲ್ಯದ ಹುಡುಕಾಟ ನಡೆಸುತ್ತದೆ.

* * * *

ವಿಜಯಾ ಗುತ್ತಲ ರವರ 'ದ್ರೌಪದಿ ಮತ್ತೆ ನಕ್ಕಳೇ' ಎಂಬ ಕವಿತೆಯೂ ಹೀಗೆಯೇ ದ್ರೌಪದಿಯ ಬದುಕಿನ ವಿಫಲತೆಯತ್ತ ಬೆರಳು ಮಾಡುತ್ತದೆ. ದ್ರೌಪದಿಯ ನಗುವಿನೊಂದಿಗೆ ಕೌರವನಲ್ಲಿ ಹೊತ್ತಿದ ಅಗ್ನಿಯನ್ನು ಸಮೀಕರಿಸುತ್ತ, ಆ ನಗು ತಂದ ಆಘಾತ ಅಪಘಾತಗಳೆಂತವು, 'ಅಗ್ನಿ' ಮಾಡಿದ ಅಪಾಂತರಗಳೆಂಥವೆಂಬುದನ್ನು ಸೂಕ್ಷ್ಮವಾಗಿ ಸ್ಪಷ್ಟವಾಗಿ ಗುರುತಿಸುತ್ತಾರೆ. ಆಕೆಯ 'ನಗೆ' ಈತನ 'ಅಗ್ನಿ' ನಂದುವಷ್ಟರಲ್ಲಿ ಮಹಾಭಾರತವೇ ಆಗಿಹೋಗಿರುತ್ತದೆ. ವಿಧಿಲೀಲೆಯೆಂಬಂತೆ ಕ್ರಿಯೆ ಕರ್ಮ– ಫಲಗಳ ಸರಪಳಿಯಲ್ಲಿ ಹಿಡಿದಿಡುವ 'ದ್ರೌಪದಿ ಮತ್ತೆ ನಕ್ಕಳೇ' ಕವನವು ದ್ರೌಪದಿಯ ಬದುಕಿನ ವಿಫಲತೆಯ ದುಃಖಾಂತವಾದ ಸಾರವನ್ನೇ ಕೊಡುತ್ತದೆ.

ಭಾರತೀ ಪಾಟೀಲರ 'ಅಕ್ಕ ಕೇಳವ್ವ' ಸಂಕಲನದಲ್ಲಿ ಬಂದಿರುವ 'ದ್ರೌಪದಿ' ಎಂಬ ಕವಿತೆಯಲ್ಲಿ ದ್ರೌಪದಿಯ 'ಏಕಾಂಗಿತನವನ್ನು ಸ್ಪಷ್ಟೀಕರಿಸುವಂತಿದೆ.

'....... ಮ್ಲಾನ ರೋದನದ
ನೋವಿನ ನೆಲೆ'. ದ್ರೌಪದಿಯಲ್ಲಿ ಹೆಪ್ಪುಗಟ್ಟಿರುವುದಕ್ಕೆ

ಕವಿ ತಿಳಿಯುವ ಕಾರಣ, ನೈಜ ಪ್ರೀತಿಯನ್ನು ಹೊಮ್ಮಿಸದ, ಬೇಜವಾಬ್ದಾರಿಯಿಂದ ವರ್ತಿಸುವ ಗಂಡಂದಿರು.

'ತಾಯ ಮಾತಿಗೆ ಮಣಿದು
ಬಿಗಿದಿಹರು ಕೊರಳ ತಾಳಿ'

'ಯಾರಿಹರು ಹೇಳು
ನಿನ್ನ ಹೃದಯದ ಸನಿಹ ?''

ದ್ರೌಪದಿಯ ಜೀವನಕ್ಕೆ ಯಾರೂ ಆಪ್ತವಾಗದೆ, ಆಕೆಯೂ ಯಾರ ಹೃದಯದಲ್ಲೂ ಲೀನವಾಗದೇ ಉಳಿಯುವ ದ್ರೌಪದಿಯ ಒಂಟಿ ತನವನ್ನು ಗುರುತಿಸುತ್ತಲೇ ಕವಿ ಮಧ್ಯಮ ವರ್ಗದ ಹೆಣ್ಣಿನ ಒಂಟಿತನಕ್ಕೆ (ಅಂಶ) ಸಂಬಂಧ ಕಲ್ಪಿಸುವ ದಿಕ್ಕಿನಲ್ಲಿರುವಂತೆ ಭಾಸವಾಗುತ್ತಾರೆ.

* * *

ದ್ರೌಪದಿಯ ಪ್ರತಿಷ್ಠೆ ಪ್ರತಿಕಾರಗಳ ಹೋರಾಟದ ವಿಜೃಂಭಣೆಯ ಜೀವನವೆಲ್ಲ ವೈಫಲ್ಯವಾದಂತೆ ಚಿತ್ರಣ ಕೊಡುವ ಈ ಕವನಗಳು ದ್ರೌಪದಿಯನ್ನು ದುರಂತ ನಾಯಕಿಯಂತೆ ನೋಡಿವೆ. ಮಹಾಭಾರತದ ಯುದ್ಧಕ್ಕೆ ದ್ರೌಪದಿಯೇ ಕಾರಣ ಎಂಬಂತೆ ಗುರುತಿಸಿಕೊಂಡಿರುವ ದ್ರೌಪದಿ ನಿಜಕ್ಕೂ ದುರಂತ ನಾಯಕಿಯಾಗಿದ್ದಾಳೆ. '' ದ್ರೌಪದಿಗೆ ಒದಗಿದ ಆಪತ್ತುಗಳು, ಈ ಜಗತ್ತಿನ ಮನುಷ್ಯರು ತಂದು ಒಡ್ಡಿದ ಆಪತ್ತುಗಳು. ಹಾಗೆಯೇ ಪತಿಯಂದಿರು ತಮ್ಮ ನಿಷ್ಕ್ರಿಯತೆಯಿಂದ ಸ್ವಂತಕ್ಕೆ ಬರಮಾಡಿಕೊಂಡ ಆಪತ್ತುಗಳು '' (ಇರಾವತಿ ಕರ್ವೆ, : ಯುಗಾಂತ : 1973 : 93ನೇಪುಟ) ಅವಳ ಜೀವನದ ವೈಫಲ್ಯಕ್ಕೆ ಕಾರಣಗಳಾಗಿಗುರುತಿಸುತ್ತಾರೆ.

ಮಹಾಭಾರತದುದ್ದಕ್ಕೂ ಪೌರಾಣಿಕ ಮಹಿಳೆಯರಲ್ಲಿ ಎಲ್ಲರಿಗಿಂತ ಹೆಚ್ಚಿನ ಜ್ಞಾನಿಯಂತೆ ಇರುವ ದ್ರೌಪದಿ ಸೀತೆಗಿಂತ ಹೆಚ್ಚಿನ ಪರೀಕ್ಷೆಗೆ ಒಳಗಾದ ಹೆಣ್ಣು. ಇದನ್ನು ಜನಪದಗೀತೆಯೊಂದರಲ್ಲಿ ಹೀಗೆ ಗುರುತಿಸಲಾಗಿದೆ.

' ಸೀತಾದೇವಿಯಷ್ಟು ಸಿರಿಯುನುಂಡವರಿಲ್ಲ
ದ್ರೌಪದಿಯಷ್ಟು ಹರಲೀಯ ಹೊತ್ತವರು
ಈ ಲೋಕದಾಗ ಯಾರಿಲ್ಲ '೨.

ಸೀತೆಯ ಮತ್ತು ದ್ರೌಪದಿಯ ಕಥೆಗಳಲ್ಲಿ ವನವಾಸ, ಯುದ್ಧ, ಇತ್ಯಾದಿ ಶಬ್ದಗಳಲ್ಲಿ ಸಾಮ್ಯವಿದೆಯೇ ಹೊರತು ಜೀವನದ ಕಷ್ಟ ಸುಖಗಳಲ್ಲಿ ಸಾಮ್ಯವಿಲ್ಲ. ದ್ರೌಪದಿ ಕ್ರಿಯಾಶೀಲಳಾದ ಸ್ವಂತಿಕೆಯುಳ್ಳವಳಾಗಿ, ವೀರಳಾಗಿ ಬದುಕಿದ್ದವಳಾದರೂ ದ್ರೌಪದಿಯ ಕುರಿತ ಕವಿತೆಗಳು ಅವಳ ಜೀವನದ ವೈಫಲ್ಯತೆಯ ಸಾರವನ್ನು ಗ್ರಹಿಸಿವೆ.

ಶಕುಂತಳೆ

ಮಹಾಭಾರತದಲ್ಲಿಯ ಶಕುಂತಳೋಪಾಖ್ಯಾನ ಮತ್ತು ಕಾಳಿದಾಸ ವಿರಚಿತ ಅಭಿಜ್ಞಾನ ಶಾಕುಂತಲಗಳು, ಶಕುಂತಲ –ದುಷ್ಯಂತರ ವಿವರಗಳನ್ನು ತೆರೆದಿಡುತ್ತವೆ. 'ಅಭಿಜ್ಞಾನ ಶಾಕುಂತಲಂ' ನ ಕನ್ನಡ ಅನುವಾದದ ನಾಟಕದ ಕಥೆ ಹೆಚ್ಚು ಜನರಿಗೆ ಗೊತ್ತೇ ಇರುತ್ತದೆ. ಶಕುಂತಳೆ ಅನೇಕರಲ್ಲಿ ಪ್ರಣಯಿನಿಯಾಗಿಯೇ ನೆನಪಿನಲ್ಲಿ ಉಳಿಯುತ್ತಾಳೆ. ಶಕುಂತಲಳನ್ನು ವಸ್ತುವಾಗಿ ಹೊಂದಿದ ಆಧುನಿಕ ಕನ್ನಡ ಕವಿತೆಗಳು ಹಲವು ಇರಬಹುದಾದರೂ ಗಮನಾರ್ಹವಾದ ಎರಡು ಅಥವಾ ಮೂರು ಕವಿತೆಗಳ ಅರ್ಥೈಸುವಿಕೆಯನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಎಂ.ಆರ್.ಕಮಲ ರವರ ' ಶಕುಂತಳೋಪಾಖ್ಯಾನ ' ಕಥನಾತ್ಮಕವಾಗಿರುವ ಕವಿತೆ . ' ಗಿಡದೊಂದಿಗೆ ಗಿಡವಾದವಳ, ಹುಲ್ಲೆ ಮರಿಯಾದವಳ ' ಶಕುಂತಳೆಗೆ

ವಿಶ್ವಾಸ ಘಾತವಾದುದರ ಚಿತ್ರಣ ನೀಡುತ್ತವೆ.

'.......... ಉಂಗುರವಿಟ್ಟ, ನಡೆದೇಬಿಟ್ಟ'
' ಚಿತ್ರದಲಿ ಬರೆದ ಪ್ರತಿಮೆಯಂತಾದಳು ಹುಡುಗಿ'

ಎಂಬ ಕವನದ ಸಾಲುಗಳು ಶಕುಂತಲೆಯ ಜೀವನದ ಕಥೆಯೊಂದಿಗೆ ಸಾಗುತ್ತವೆ.

ವಿಶ್ವಾಸಘಾತ , ಅನುಭವಗಳಿಂದ ಹುಡುಗಿ ಬೆಳೆಯುತ್ತ, ಪ್ರೌಢೆಯಾಗುತ್ತಾ, ಹೋಗುತ್ತಾಳೆ ಎಂಬುದನ್ನು ಕವನ ಹೇಳಬಯಸುತ್ತದೆ.

' ಭರತನಿಗಾಗಿಯೇ ಇರಬೇಕು
ಧಾವಿಸಿಬಂದ ದುಷ್ಯಂತ.'

' ದೂರ್ವಾಸನ ಶಾಪ, ಉಂಗುರದ ನೆಪ
ಒಡ್ಡಿ ನಿಂತವನ ನೋಡಿ ನಕ್ಕಳು
('' ನೋವುಂಡು ನಕ್ಕ ನಗೆ ನಗೆಯಲ್ಲ '')

'.......... ಮತ್ತೆ ಉಂಗುರದ ಸಂಭ್ರಮ
ಹಿಮಗಟ್ಟಿದ್ದ ಹುಡುಗಿ — ಅಲ್ಲಲ್ಲ ಪ್ರೌಢೆ
ಥಣ್ಣಗೆ ನುಡಿದಳು.'

'' ನನಗೆ ಈ ಉಂಗುರದಲ್ಲಿ ನೆಚ್ಚಿಗೆಯಿಲ್ಲ. ''

ಇದಕ್ಕಿಂತಲೂ ಸೂಕ್ಷ್ಮ ಎಳೆಗಳನ್ನು ಹಿಡಿದಿಡುವ ' ಶಕುಂತಲೆಯೊಂದಿಗೆ ಕಳೆದ ಅಪರಾಹ್ನ ' ಎಂಬ ವೈದೇಹಿಯವರ ಸಣ್ಣ ಕಥೆ, ಶಕುಂತಲೆಯ ಮನಸ್ಸಿನ ಭಾವನೆಯ ಸಿಹಿ — ಕಹಿ ಅನುಭವಗಳನ್ನೆಲ್ಲಾ ರೇಷ್ಮೆ ಕಸೂತಿಯಂತೆ ನವಿರಾಗಿ ಬಿಡಿಸಿಡುತ್ತದೆ. ಕಥೆ ಹೇಳುವ ಶಕುಂತಲೆ ' ಬೆಳ್ಳಿ ಕೂದಲ ಬೈತಲೆ ' ಯ ಪ್ರಾಯದವಳು. ಪ್ರೌಢಳಾದ ಶಕುಂತಲೆಯ ಸ್ವಗತದಲ್ಲೂ ಪ್ರೌಢತೆ ಧ್ವನಿಸುತ್ತದೆ.

* * * *

ಜಿ.ಎಸ್.ಶಿವರುದ್ರಪ್ಪ ನವರ ' ಶಾಕುಂತಲದ ಐದನೆಯ ಅಂಕ ' ಎಂಬ ಕವಿತೆ ರೂಪಕಗಳನ್ನು ಬಳಸಿಕೊಂಡು ಒಂದು ಸಂದರ್ಭದ ವಿಶ್ಲೇಷಣೆಯನ್ನು ಮಾಡಿದೆ. '' ಶಂಕೆ ಬೆಂಕಿಯ ದಾರಿ ' ' ಇದೊ ಸೇತುವೆ ಮುರಿದು ' ಇತ್ಯಾದಿ ರೂಪಕಗಳನ್ನು ಬಳಸಿಕೊಂಡ ಕವಿತೆ ಶಕುಂತಲೆ ಯ ಘಟನೆಗೆ ಉಂಟಾದ ಆಘಾತಕ್ಕೆ ಕಾರಣಗಳನ್ನು, ಕಾರಣರಾದವರನ್ನು ಹುಡುಕುತ್ತ ಸಾಗುತ್ತದೆ. ಯಾರದು ನ್ಯಾಯ, ಅನ್ಯಾಯ

ಎಂಬುದರ ವಿಶ್ಲೇಷಣೆಯಲ್ಲಿ ತೊಡಗಿದೆ.

ಧರಣಿ ಮಾಲಗತ್ತಿಯವರ 'ದುಷ್ಯಂತೋಪಾಖ್ಯಾನ' ದುಷ್ಯಂತನ ದೃಷ್ಟಿಕೋನದಿಂದ (ಗಂಡಿನ) ಶಕುಂತಲೆಯನ್ನು ಗ್ರಹಿಸುತ್ತಾ, (ಹೆಣ್ಣನ್ನು) ವಿಶ್ಲೇಷಿಸುತ್ತಾ ಹೋಗಿರುವುದಾಗಿದೆ. ಶಕುಂತಲೆಯ ಬಗೆಗಿನ ಗ್ರಹಿಕೆಗಳು ಬದಲಾಗುತ್ತಾ, ಪಕ್ವವಾಗುತ್ತ, ಬೆಳೆಯುವುದನ್ನು ಕವಿತೆ ಸೆರೆ ಹಿಡಿಯುತ್ತದೆ. ದುಷ್ಯಂತನ ಮನಸ್ಸು ಇನ್ನೊಂದು ನೆಲೆಯಲ್ಲಿ ಹೆಣ್ಣಿನ ಮೇಲಿನ ಸಂಶಯವನ್ನು ಒಟ್ಟುಗೂಡಿಸಿದಂತೆ ಎಲ್ಲ ಅಂಶಗಳನ್ನು ಬಳಸಿಕೊಂಡಿದೆ. ಶಕುಂತಲೆಯ ಅಂಗ-ಅಂಗಗಳ ಸೌಂದರ್ಯಕ್ಕೆ ಸೋತಿದ್ದಾನೆ . ವಿಸ್ಮರಣೆಯ ಶಾಪವೇನೂ ಈತನಿಗಿಲ್ಲ.

'ನೆನಪಿಲ್ಲವೆಂದಲ್ಲ — ಇದೇನಿಂತ ಹೆಣ್ಣು
....
ಸಾಧ್ವಿಯೇನಿಕೆ?
ಹೊರೆಯ ಕಂಡು ಹೃದಯ ತೆರುವವಳು
ತೆರಳೇನು ? ಸಾಮ್ರಾಟನ ಕಂಡು ಮನವ ?

'ನೀ ಬರೆಲ್ಲ ಅಂತರಂಗ,, ಉಂಡದ್ದು ನಿಜ
ಬೇಲಿಯಂಚರದ ಹೊಲದಿ ಅಡ್ಡಾಡಿದ್ದು ನಾನೊಬ್ಬನೇ ?

ಹೀಗೆ ಸಾಗುವ ದುಷ್ಯಂತನ ವಿಚಾರಗಳು ಸಂಶಯಕ್ಕೆ ಸಾಕ್ಷಿಯನ್ನು ಹುಡುಕುತ್ತವೆ. ಶಕುಂತಲೆಯ ಪ್ರೀತಿಯ — ಪ್ರಣಯದ ಆಹ್ವಾನಕ್ಕೆ 'ಒಗೊಟ್ಟದ್ದು ನಿಜ, ಆದರೆ ಹೊಟ್ಟೆಹೊತ್ತವಳ ಋಷಿಗಳು ಕರೆತಂದಾಗ, ತನ್ನ ಪರಂಪರೆಯ ,ಹಿರಿಯರ ಕಥೆಗಳ, ಘಟನೆಗಳೆಲ್ಲದರೊಡನೆ ತೂಗಿಕೊಂಡು ನಿರಾಕರಣೆಯ ಮನಸ್ಸನ್ನು ಬೆಳೆಸುತ್ತಾನೆ. ಈತನಿಗೆ ಮನದಲ್ಲಿರುವ ಶಂಕೆ ಸಂಶಯಗಳು ಕೇವಲ ಆತನದಲ್ಲ. ಆತನ ವಂಶಜರ ಜೀವನ ನೋಡಿ ಕಲಿತ ಪಾಠ.

'ಅದಕ್ಕಾಗಿಯೇ ಮಿತ್ರ — ಆತ್ಮದಕ್ಷಿ
ಹುಡುಕುತ್ತಿದ್ದೇನೆ
ಅಂತರಂಗ, ಬಹಿರಂಗ'

ನಮನವಿದೆ ಜೋಡು ಕೈಗಳಿರದ
ಸಾಧ್ವಿ ಶಿರೋಮಣಿ ಶಕುಂತಲಾ ದೇವಿಯವರಿಗೆ
ಹೋಗಬಹುದು ಹೊರಗೆ
ಬರಬಹುದು ಒಳಗೆ
ದ್ವಾರ ತೆರೆದೇ ಇದೆ'

ಎನ್ನುವ ನಿರಾಸಕ್ತಿಯ , ನಿರಾಕರಣೆಯ ಮನೋಭಾವ ತಳೆದವನಾಗಿದ್ದಾನೆ.

ಶಕುಂತಲೆ ಹೇಳಲು ಪ್ರಯತ್ನಿಸುವ, ನೆನಪಿಸುವ ನೆನಪುಗಳೆಲ್ಲ ಕಿನ್ನರಿ ಭಾರಿಸಿದಂತೆ; ಕಾರಣ ಆತ 'ಕಿವಿ ಮುಚ್ಚಿ ಕುಳಿತವ'. ಕೊನೆಗೂ ಶಕುಂತಲೆಯ ಪ್ರತಿಕ್ರಿಯೆ ವ್ಯಕ್ತವಾಗುವುದಿಲ್ಲ, ಇವನ ಸಂಶಯ ಶಂಕೆಗಳಿಗೆ ಸ್ಪಷ್ಟವಾದ ನೈಜವಾದ ನಿದರ್ಶನಗಳು ಇಲ್ಲವಾದರೂ , ಪೂರ್ವಾಗ್ರಹ ಮನಸ್ಸಿನಿಂದ ಶಕುಂತಲೆಯ ಮುಗ್ಧ ಪ್ರೀತಿ, ಸೌಂದರ್ಯ, ಪ್ರೇಮಿಯ ಕರೆ ಎಲ್ಲವನ್ನೂ ಸಂಶಯಗಳಿಗೆ ಉತ್ತರಗಳಾಗಿ ಬಳಸಿಕೊಳ್ಳುತ್ತಾನೆ. ಇದು ಯಾವ ಪತ್ನಿಯ ಮೇಲೆ ಮಾಡುವ ಸಂಶಯದಂತೆ, ದುಷ್ಯಂತನ ಗಾಢವಾದ ಸಂಶಯ ಸಾಗರವಾಗಿದೆ. ಬಹುಶಃ ಮನಶಾಸ್ತ್ರದ ಹಿನ್ನೆಲೆಯಲ್ಲಿ ಗಂಡಿನಲ್ಲಿ ಇರಬಹುದಾದ ಹೆಣ್ಣಿನ ಬಗೆಗಿನ ಸಂಶಯವನ್ನು ಗುರುತಿಸುವ ಕವಿತೆಯಾಗಿಯೂ , ಕವನವಿದೆ.

* * *

ಈ ವಸ್ತುಗಳನ್ನು ಕುರಿತ ಕವಿತೆಗಳು ದುಷ್ಯಂತನಿಗೆ ಸಂಶಯ ಪೂರಿತ ಮನ, ನೆನಪಿದ್ದರೂ ನಿರಾಕರಿಸುವ ಧೋರಣೆ, ಉಂಗುರದ ನೆವ, ಇವುಗಳನ್ನೇ ಚಿತ್ರಿಸುತ್ತಾ ಶಕುಂತಲೆಗೆ ಆದ ಆಘಾತ ಅನ್ಯಾಯ ಇವುಗಳತ್ತಲೇ ಕನಿಕರಿಸುತ್ತದೆ. ಆಘಾತ, ಅನ್ಯಾಯಗಳನ್ನು ದಾಟಿಕೊಂಡು ಬೆಳೆದು ಪ್ರೌಢಗಳಾಗುವ, ಅನುಭವವನ್ನು ದಟ್ಟೈಸಿಕೊಳ್ಳುವ ಹೆಣ್ಣಾಗಿ ಶಕುಂತಲೆಯನ್ನು ನೋಡಬಯಸುವ ಕವಿತೆಗಳು ಸ್ತ್ರೀಪರವಾದ ಧೋರಣೆಯನ್ನು ತಳೆದಂತಿವೆ.

ಕುಂತಿ

ಕುಂತಿಯ ಪಾತ್ರ ಮಹಾಭಾರತದ ಮುಖ್ಯ ಪಾತ್ರಗಳಲ್ಲಿ ಒಂದು. ಮೊದಲೇ ನಿರ್ಣಯವಾದ ಭವಿಷ್ಯಕ್ಕೆ ತರೆತಲಾಗಿದವರಲ್ಲಿ ಒಬ್ಬಳಾದ ಕುಂತಿ, ಮಹಾಭಾರತದ ದಾಳಗಳಲ್ಲಿ ಸೇರಿದವಳು. ಶೂರಸೇನನ ಮಗಳಾದ 'ಪೃಥಾ' ಕುಂತಳ ದೇಶದ ಭೋಜರಾಜನಿಗೆ ಕೊಡಲ್ಪಟ್ಟು 'ಕುಂತಿ' ಯಾಗುತ್ತಾಳೆ. ಅವಳ ಬಾಲ್ಯ, ಬಾಲಲೀಲೆಗಳ ವಿವರಣೆ ಇರದಿದ್ದರೂ 'ಉದ್ಯೋಗ ಪರ್ವದಲ್ಲಿ'' ಸಂಪತ್ತನ್ನು ದಾರಿಹೋಕನಿಗೆ ಕೊಟ್ಟಂತೆ ನನ್ನ ತಂದೆಯು ನನ್ನನ್ನೇ ಅರ್ಪಿಸಿದನು'' (ಯುಗಾಂತ, ಇರಾವತಿ ಕರ್ವೆ, 1973, ಪುಟ 54, ಉಲ್ಲೇಖಿತ) ಎನ್ನುವ ಕುಂತಿಗೆ ತನ್ನ ಬಾಳಿನ ನಿರ್ಣಯಗಳು ಬಾಲ್ಯದಲ್ಲಿಯೇ ಬೇರೆಯವರ ಕೈಸೇರಿದ್ದಕ್ಕೆ ವಿಷಾದವಿದೆ. ಮಹಾಭಾರತದಲ್ಲಿ ಕುಂತಿಯ ಬಾಲ್ಯದಿಂದ ಮುಪ್ಪಿನ ವರೆಗಿನ ಹಲವು ಘಟನೆಗಳು ಉಲ್ಲೇಖಿತವಾಗಿದ್ದರೂ ಎಲ್ಲವನ್ನು ಮುಖ್ಯವೆಂದು ಎಣಿಸುವುದಿಲ್ಲ. ಕನ್ನಡದ ಆಧುನಿಕ ಕವಿತೆಗಳು ಕುಂತಿಯ ಬಗೆಗೆ ಆಯ್ದುಕೊಳ್ಳುವ ಘಟನೆಗಳು ಮುಖ್ಯವಾಗಿ ಆಕೆಯ ಹುಡುಗಾಟದ ಯೌವ್ವನದಿಂದ ತಾಯಿಯಾಗಿ ಬೆಳೆಯುವ ತಾಯಿಯ ಜವಾಬ್ದಾರಿಯಿಂದ ಜಾರಿದ ಸಂದರ್ಭಗಳೇ ಆಗಿರುತ್ತದೆ.

ಸರಸ್ವತೀ ಗೌಡರ 'ಕುಂತಿ' ಎಂಬ ಕವನ, ಕುಂತಿಯು ಕೈಗೊಳ್ಳುವ ದೃಢ ನಿರ್ಧಾರ, ನಿಶ್ಚಿತ ಕ್ರಿಯೆಗಳಿಗೆ ಒಪ್ಪು ಮತ್ಸರ ಪಟ್ಟಂತೆಯೂ, ಘುಬ್ಬವಂತೆಯೂ, ಇನ್ನೊಮ್ಮೆ ತಿರಸ್ಕಾರದ ಭಾವವು 'ಕೂಸುತಲಾಗದೆ ತಾಯಿಯಾದಳು ಕುಂತಿ' ಎನ್ನುವಲ್ಲಿದೆ.

'........ ಷೋಡಶಿ
ಮುನಿಯ ಹೃದಯ ಕದ್ದು,
ಮಂತ್ರ ಗೆದ್ದಳು'

'ಹುಡುಗಾಟವಾಡಿ ಬಿಟ್ಟಳು'

ಹಸುಗೂಸನ್ನು 'ಗಂಗೆಯ ಮಡಿಲ ಸೇರಿಸಿದಳು
ನೋಯಲಿಲ್ಲ ಅಳಲಿಲ್ಲ'

'ಹಸೆ ಮಣೆ ಏರಿದಳು
ಮತ್ತೆ ಹಸಿಯಾದಳು ಕುಂತಿ'

ಈ ಎಲ್ಲಾ ಸಾಲುಗಳು ಕುಂತಿಗೆ ಎದುರಾದ ಹುಡುಗಾಟಿಕೆಯ ಉರುಳಿನ ಸಂದರ್ಭಗಳು ತಪ್ಪಿಸಿಕೊಂಡ, ಜಾರಿಕೊಂಡ ಕುಂತಿಯ ಕುರಿತು ವಿವಿಧ ಭಾವಗಳನ್ನು ಚೆಲ್ಲಿವೆ.

‘ ಕುಂತಿಯ ಬೆಳಗು ’ ಎಂಬ ಕುಂತಿಯನ್ನು ಕುರಿತ ವಿಜಯಾದಬ್ಬೆಯವರ ಕವನ ಜವಾಬ್ದಾರಿ ನಡೆಸಲಾಗದ ವಿಫಲಳಾದ ತಾಯಿ ಯಾಗಿ, ಅಸಹಾಯಕ ತಾಯಿಯ ಸಂಕೇತವಾಗಿ ಕುಂತಿಯನ್ನು ಬಳಸಿಕೊಂಡಿದೆ. ಹಾಗೆಯೇ ತನ್ನ ಇಚ್ಛೆಯಂತೆ ‘ಏನೂ ಆಗಲಿಲ್ಲ ಎಂದು ವಿಷಾದಿಸುವ, ಪಾಲಿಗೆ ಬಂದ ಜೀವನದ ಜವಾಬ್ದಾರಿ ಹೊತ್ತ ಮಹಿಳೆಯಾಗಿ ಸ್ಪಷ್ಟವಾಗುತ್ತಾಳೆ.

‘ ನನ್ನ ಹೆಜ್ಜೆಗಳು
ಭೂತದ ಈ ಮರಳಲ್ಲಿ
....
....
....
.... ಹೂತು ಹೋಗಿದೆ. ’

ಎನ್ನುವ ಸಾಲುಗಳಲ್ಲಿ ‘ ಭೂತದ ಈ ಮರಳು ’ ಎಂಬ ನುಡಿ ಮಹಾಭಾರತದ ಪರಂಪರೆಯನ್ನೇ ಗಮನಿಸುವಂತಿದೆ. ಕುಂತಿಯ ಬಾಳಿನ ಹೆಜ್ಜೆಗಳು, ಕಾಲಚಕ್ರರೆ ಸೆಳೆದುಕೊಳ್ಳುವ ಉಸುಕಿನಂತೆ, ಘಟಿಸುವ ಘಟನೆಗಳ ವಶವಾಗಿವೆ. ಹೆಜ್ಜೆಗಳು ಹೂತುಹೋಗುವ ಚಿತ್ರಣವು ಕುಂತಿಯ ಬಾಳಿನ ಕ್ರಿಯೆಗಳಿಗೆ ಪ್ರತಿಮೆಯಾಗಿವೆ. ತನ್ನ ಇಚ್ಛೆಯಂತೆ ಕರ್ಣನ ತಾಯ್ತನವನ್ನು ಉಳಿಸಿಕೊಳ್ಳಲಾಗದಿದ್ದರೂ, ಪಗಡೆಯ ಕಾಯಿಯಾಗಿ ‘ ತೊಟ್ಟಬಾಣವ ತೊಡಗಿರೆಂದು ಕೇಳಲು’ ಬಂದಾಕೆ,

‘ ನಿನ್ನ ಹರಣ ದ್ಧರಣಕ್ಕೆ ಮತ್ತೆ ಬಂದಿದ್ದೇನೆ,
ತಾಯೆಂದವಳು, ತಾಯಾಗದವಳು ’

ಎನ್ನುವ ವಿಷಾದದಲ್ಲಿ, ತನ್ನ ತಾನು ವಿಮರ್ಶಿಸಿಕೊಂಡು ಆತ್ಮಾವಲೋಕನ ಮಾಡಿ ಕೊಳ್ಳುವ ಸೂಕ್ಷ್ಮಮತಿಯಾಗಿ ಕುಂತಿ ಚಿತ್ರಿತಳಾಗಿದ್ದಾಳೆ.

ಬಹುತೇಕವಾಗಿ ಕುಂತಿಯ ಬಗ್ಗೆ ಎಲ್ಲರಿಗೂ ಅಸಡ್ಡೆಯಿರುವುದು ಆಕೆಯ ಜವಾಬ್ದಾರಿ ವಿಮುಖವಾದ ತಾಯ್ತನದ ಸಲುವಾಗಿಯೇ. ಕುಮಾರ ವ್ಯಾಸ ಭಾರತದಲ್ಲಿ ಕುಂತಿ,ಕರ್ಣನ ಮೊದಲ ಭೇಟಿಯಲ್ಲಿ ‘ ತಾಯಿವೇಷಧಾರಿಯ ನಾಟಕದ ಪಾತ್ರದಂತೆ ‘ಬಂದು ಹೋಗುವವಳಾಗಿದ್ದಾಳೆ. ಆಕೆಗೆ ಆತ್ಮವಿಮರ್ಶೆಯ ಪಶ್ಚಾತ್ತಾಪವಿಲ್ಲ.

ಹೆಚ್ಚು ಕಡಿಮೆ ಇದೇ ಧಾಟಿಯಲ್ಲಿ ಎಲ್ಲರ ನೆನಪಿನಲ್ಲಿ ಉಳಿಯುವ ಕುಂತಿ ಎಲ್ಲರ ವಿಮರ್ಶೆಗೆ ಒಳಗಾಗುತ್ತಾಳೆ. ಆದರೆ, 'ಕುಂತಿಯ ಬೆಳಗು' ಕವಿತೆಯಲ್ಲಿ ಸೂಕ್ಷ್ಮ ಮನಸ್ಸಿನವಳಾಗಿ, ಅಂತರ್ಯದ ಭಾವವನ್ನು ಹೊರಗೆಡಹುವ ಜೀವಂತಿಕೆಯುಳ್ಳವಳಾಗಿ ಸೃಷ್ಟಿಯಾಗಿರುವ ದಬ್ಬೆಯವರ ಕುಂತಿ ವಿಶಿಷ್ಟಳಾಗಿದ್ದಾಳೆ.

o o o o o

ಅಹಲ್ಯೆ

ಅಹಲ್ಯೆ ಕಥೆ ಖಚಿತವಾದ ಆಕಾರವನ್ನು ತಾಳಿ ಮೊದಲು ಕಾಣಿಸಿಕೊಳ್ಳುವುದು ವಾಲ್ಮೀಕಿ ರಾಮಾಯಣದಲ್ಲಿ. ಅಹಲ್ಯೋಪಾಖ್ಯಾನವು ನಮ್ಮ ಪೌರಾಣಿಕ ಕಥೆಗಳ ರಾಶಿಯಲ್ಲೂ ಮರೆಯಾಗದೆ ವಿಶೇಷ ಪ್ರಸಿದ್ಧಿ ಹೊಂದಿದಕ್ಕೆ ಅದು ರಾಮನ ಮಹಿಮೆಗೆ ನಿದರ್ಶನವಾಗಿ ಬಂದದ್ದು ಕಾರಣವಿರಬಹುದು.

ಇಂದ್ರನು ಅಹಲ್ಯೆಯನ್ನು 'ಏಕೆ ಕಾಮಿಸಿದನೆಂಬುದನ್ನು ಅವರ ಮೋಹಕ್ಕೆ ಅವಳು ಹೇಗೆ ಒಳಗಾದಳೆಂಬುದನ್ನೂ ವಾಲ್ಮೀಕಿ ವಿಸ್ತರಿಸಿಲ್ಲ. ಮಿಥಿಲೆಗೆ ಹೋಗುವಾಗ ಆ ಊರ ಹತ್ತಿರದಲ್ಲಿ ಪಾಳು ಗೌತಮಾಶ್ರಮ ಕಂಡು ರಾಮ ಕೇಳುವ ಪ್ರಶ್ನೆಗೆ ಉತ್ತರವಾಗಿ ವಿಶ್ವಾಮಿತ್ರ ' ಅಹಲ್ಯೆ ' ಕತೆ ಹೇಳುತ್ತಾನೆ.

ಮುನಿವೇಷದಲ್ಲಿ ಇಂದ್ರನು ಬಂದು ಅಹಲ್ಯೆಯ ಸಹವಾಸ ಕೋರಿದನು ' ಮತಿಚಕಾರ ದುರ್ಮೇಧಾ ದೇವರಾಜ ಕುತೂಹಲಾತ್ ' ಎಂದು ಒಂದು ಮಾತಿನಲ್ಲಿ ಅವಳ ಮನೋಭಾವವನ್ನು ವಾಲ್ಮೀಕಿ ಸೂಚಿಸುತ್ತಾನೆ. ಕಾಮಿಗಳಿಬ್ಬರ ಆಶಯೂ ಈಡೇರಿತು. ಬೇಗ ಹೊರಟು ಹೋಗುವಂತೆ ಅಹಲ್ಯೆ ' ಸುರಶ್ರೇಷ್ಠನಿಗೆ ' ಎಚ್ಚರಿಕೆ ಕೊಟ್ಟಳು. ಗೌತಮ ಬಂದು ಬಿಟ್ಟನೆಂದು ಇಂದ್ರನು ಅಳುಕುತ್ತಾ ಆಶ್ರಮದಿಂದ ಹೊರಬಿದ್ದನು. ಆದರೆ ಎದುರೇ ಬಂದ ಗೌತಮ ಇಂದ್ರನಿಗೆ ' ವಿಫಲ ' ವಾಗೆಂದು ಶಪಿಸಿ ಅಹಲ್ಯೆಗೆ ಶಾಪವನ್ನು ಪರಿಹಾರವನ್ನೂ ಒಂದೇ ಉಸಿರಿನಲ್ಲಿ ಹೇಳಿ ಹಿಮವತ್ಪರ್ವತದಲ್ಲಿ ತಪಸ್ಸು ಮಾಡುತ್ತಾ ನಿಂತನು. ರಾಮನಿಂದ ಪುನರ್ಜನ್ಮ ತಾಳಿದ ಪರಿಶುದ್ಧಳಾದ ಅಹಲ್ಯೆಯೊಡಗೂಡಿ ಗೌತಮ ಸುಖಿಯಾಗುತ್ತಾನೆ.

ಹೀಗೆ ವಾಲ್ಮೀಕಿ ನಾಲ್ಕು ಮಾತುಗಳಲ್ಲಿ ರೇಖಿಸಿ ಕೈ ಬಿಟ್ಟ ಪ್ರಸಂಗ ಹಲವರ ಕುತೂಹಲ ಕೆರಳಿಸುತ್ತದೆ. (ಅಹಲ್ಯೆ ಅದೃಶ್ಯೆಯಾಗಿ ನರಳುವಳೆಂಬ ಸೂಚನೆ ವಾಲ್ಮೀಕಿಯ ಕಣಿಯಿಂದ ಬಂದದ್ದು ; ಆದರೆ ನಂತರದ ಪುರಾಣಿಕರು ಅವಳನ್ನು ' ಶಿಲಾಮೂರ್ತಿ ' ಯನ್ನಾಗಿ ಮಾರ್ಪಡಿಸುತ್ತಾರೆ.)

ಅಹಲ್ಯೆಯರು ಪೌರಾಣಿಕ ಕತೆಯಾದರೂ, ಸೀತೆಯಂತೆ ಆದರ್ಶ ಮಾದರಿಯನ್ನು ಹೇಳುವ ನೇರವಾದ ನೀತಿ ಕತೆಯೇನು ಅಲ್ಲ. ಪಂಚ ಮಹಾ ಪತಿವ್ರತೆಯರಲ್ಲಿ ಒಬ್ಬಳಾದ 'ಅಹಲ್ಯೆಯ ಪತಿವ್ರತೆಯ ಪಟ್ಟಕೆ ಅನೇಕರ ವಿರೋಧಾಭಿಪ್ರಾಯವಿದೆ. ಕನ್ನಡದ ಅನೇಕ ಕವಿತೆಗಳಲ್ಲಿ 'ಅಹಲ್ಯೆ' ಬಳಕೆಯಾಗಿದ್ದರೂ ಬಹುಮುಖ್ಯವೆನಿಸುವ ಕೆಲವು ಕವಿತೆಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಮಾಸ್ತಿಯವರ ಮಲಾರ ಕವನ ಸಂಗ್ರಹದಲ್ಲಿ 'ನಿತ್ಯಳಾದ ಅಹಲ್ಯೆ' ಎಂಬ ಅಹಲ್ಯೆಯನ್ನು ಕುರಿತ ಕವನ ಪೌರಾಣಿಕತೆಯಿಂದ ಮಾನವೀಕರಣಗೊಳಿಸಿ ವಾಸ್ತವದ ಮನುಷ್ಯ ಪ್ರಪಂಚಕ್ಕೆ ಹೋಲಿಸಿ ನೋಡಿರುವುದಾಗಿದೆ. ತಮ್ಮ ಎಲ್ಲಾ ಬರಹಗಳಲ್ಲಿ ಸಾಂಪ್ರದಾಯಿಕತೆಯನ್ನು ಸಮರ್ಥಿಸುವವರಾಗಿರುವ ಮಾಸ್ತಿ ಅಹಲ್ಯೆಯನ್ನು ತಪ್ಪುಮಾಡಿದ, ಆತ್ಮವಂಚನೆಮಾಡಿಕೊಂಡು ಕಲ್ಲಾದ ಹೆಣ್ಣಿನಂತೆ ಚಿತ್ರಿತಳಾಗಿದ್ದಾಳೆ.

'ಇಂದ್ರನಿಗೆ ಮನಸೋತು, ಅವನು ಪತಿರೂಪದಲಿ
ಬಂದ ಮಾತ್ರಕ್ಕೆ ತನ್ನ ತಪ್ಪು ಮರೆಯುವುದೆಂದು
ಅವನಿಗಾತ್ಮವನಿತ್ತು ಋಷಿ ಪತ್ನಿ ಮಾಡಿದುದು
ಧರ್ಮವೆನಿಸಿತೆ? ಆತ್ಮವಂಚನೆಯ ಕೋಡಗದ
ಕೈನೇರಬೇಡ ಮನುಜ ....
ಕಲ್ಲಾಗುವುದು ಹೃದಯ, ಆತ್ಮವೆಂಬುದು ನಂದಿ'

ಇವರ ಪದ್ಯದಲ್ಲಿ ನ್ಯಾಯಾನ್ಯಾಯದ ವಿವೇಚನೆಯಿದೆ. 'ಜಾಣೆಯೊಬ್ಬಳನ್ನು ಪತಿವ್ರತೆಯಾಗಿಸಿರುವುದಕ್ಕೆ ಅಸಮಾಧಾನವಿದೆ. ವಾಲ್ಮೀಕಿ ಈ ಪ್ರಕರಣವನ್ನು 'ಧುರ್ವೇದ' ಎಂದು ಕರೆದಂತೆ, ಮಾಸ್ತಿಕೂಡ 'ಇದು ಸರಿಯಲ್ಲ' ಎನ್ನುತ್ತಾರೆ. (ರಹಮತ್ ತರೀಕೆರೆ, ಮರದೊಳಗಣ ಕಿಚ್ಚು, 1996, ಪುಟ 128). ಒಬ್ಬರ ಜೀವನವನ್ನು ನೋಡಿ ಕಲಿಯಬೇಕಾದ ಪಾಠದಂತೆ, ಅಹಲ್ಯೆಯ ಕಥೆ ಮಾಸ್ತಿಯವರ ದೃಷ್ಟಿಯಲ್ಲಿದೆ. ಇದೇ ಕಥಾವಸ್ತುವಿರುವ ಪು.ತಿ.ನ.ರವರ ಅಹಲ್ಯೆ ನಾಟಕವು ಅಹಲ್ಯೆಯು ಜಾರಿದ್ದೂ ಸಹಜ ಎಂಬಂತೆ ನೋಡಿದರೂ, ಅಹಲ್ಯೆ ತಪ್ಪಿತಸ್ಥಳಾಗಿಯೇ ಉಳಿಯುತ್ತಾಳೆ.

ಬೇಂದ್ರೆಯವರ ' ಅಹಲ್ಯೆ ' ಅವರ ಅತ್ಯುತ್ತಮ ಕವಿತೆಗಳಲ್ಲಿ ಒಂದು . ದಾಂಪತ್ಯದಲ್ಲಿ ' ನಂಬಿಕೆಯ ಬಿಲ್ಲಾಟದಿಂದಾಗಿ ಉಂಟಾಗುವ ಮನಸ್ಸಿನ ಕಹಿಭಾವಗಳು, ಬಿರುಕುಗಳು, ಮರುಕಗಳು, ವಿರಹಗಳು, ಅರಿವುಗಳು, ನಲುಮೆಗಳೆಲ್ಲದರ ಸೂಕ್ಷ್ಮ ಎಳೆಗಳಿಂದ ನೇಯ್ಗೆಗೊಂಡಿರುವ ಬೇಂದ್ರೆಯವರ ' ಅಹಲ್ಯೆ ' ವಿಶಿಷ್ಟ-ಶ್ರೇಷ್ಠ ಕವಿತೆಯಾಗಿದೆ. ಈ ಕಥೆ ಪೌರಾಣಿಕತೆಯಿಂದ ಮಾನವೀಕರಣಗೊಂಡಿರುವುದಲ್ಲದೆ, ಸೂಕ್ಷ್ಮ ಭಾವದ ಎಳೆಗಳನ್ನು ಉಳ್ಳ ಪಾತ್ರಗಳಾಗಿ ಅಹಲ್ಯೆ,ಗೌತಮರು ಚಿತ್ರಿತರಾಗಿದ್ದಾರೆ. ಕಥೆಯಲ್ಲಿ ಘಟಿಸಿರಬಹುದಾದ ' ಜಾರಿದ ' ಘಟನೆಯ ಉಲ್ಲೇಖವಿಲ್ಲದ, ಕವಿತೆಯು ಅಹಲ್ಯೆಯ ' ಜಾರುವಿಕೆ'ಯನ್ನು ಸುಳ್ಳಾಗಿಸಿಬಿಡುತ್ತದೆ. ಘಟನೆಯ ಅಥವಾ ದೃಶ್ಯದ ತಪ್ಪುಗ್ರಹಿಸುವಿಕೆಯಿಂದ ಆಗುವ ಕ್ರಿಯೆ-ಪ್ರಕ್ರಿಯೆಗಳಷ್ಟೇ ಕವಿತೆಯಲ್ಲಿ ಪ್ರಮುಖವಾಗಿವೆ.

' ಒಲವನು ತೋರುವ ಕಣ್ಣಲಿ ಮೂಡಿದೆ ಕೆಂಗಿಡಿಯು
ಒಲವನು ನೀಡುವ ಎದೆಯಲಿ ಜಡಭಾವದ ರುಗ್ಣಿಯು '

ಇದ್ದಕ್ಕಿದ್ದ ಹಾಗೇ ಒಂದುದಿನ ಗೌತಮನಲ್ಲಿ ಆಗುವ ಪರಿವರ್ತನೆಗಳಿವು.

' ಮುನಿನೊಂದನು 'ಛೀ ' ಎಂದನು ನಂಬುಗೆಗಿದೆ ಎಲ್ಲೆ
ಬೆರಗಾದಳು, ಬಿಲ್ಲಾದಳು, ಕಲ್ಲಾದಳಹಲ್ಯೆ '

' ನಂಬುಗೆಗಿದೆ ಎಲ್ಲೆ ' ಎಂಬ ನುಡಿ `There is an end' ಮತ್ತು `This is the end' ಎಂಬ ಎರಡು ಅರ್ಥಗಳನ್ನು ಕೊಡುತ್ತಾ ಮುನಿನೊಂದದ್ದಕ್ಕೆ, ಅಹಲ್ಯೆ, ಬೆರಗಾಗಿ, ಬಿಲ್ಲಾಗಿ, ಕಲ್ಲಾಗುವ process ಗೆ ಕಾರಣಗಳನ್ನು,ನೀಡಿದೆ. ಗೌತಮ ಇಂದ್ರರ ನಡುವೆ ಅಹಲ್ಯೆ ಬಿಲ್ಲಾಗಿ ಬಳಕೆಯಾಗಿದ್ದೂ ಹೌದಾಗಿದೆ.

' ಎಲೇ ಜಾರಿಣಿ ನೀ ಜಾರಿದೆ ' ಎನ್ನುವ ಗೌತಮನ ನಂತರದ ಮನಸ್ಸು ತಕ್ಷಣದಲ್ಲಿ 'ಮರುಗಿತು ಮಡಗಿತು ಅಲ್ಲೇ ಮರ್ಮರನೆ'. ಹಾಗೆಯೇ ಗೌತಮನ ನುಡಿಕೇಳಿ ಅಹಲ್ಯೆಯಮನ ' ಮರುಗಿತು ಮಡಗಿತು ಅಲ್ಲೇ ಮರ್ಮರನೆ '. ಹೀಗೆ ಹಲವು ದೃಷ್ಟಿಗಳಿಂದ ಗೌತಮ ಮತ್ತು ಅಹಲ್ಯೆಯರನ್ನು ಪರಿಶೀಲಿಸಿ, ಕವಿ ಇಬ್ಬರ ಪರವಾಗಿಯೂ ನಿಲ್ಲುತ್ತಾರೆ.

ಜೀವನ ಪರಿಪಾಕದ ಗತಿಯಿಂದ ಅಹಲ್ಯೆಯ, ಕಲ್ಲಾದ ಮನಸ್ಸು ಸಾರೀಭಾವದಿಂದ ನಲಿಯುವುದು ರಾಮನ ಪಾದಸ್ಪರ್ಶದಿಂದಲ್ಲ.

‘ಶ್ರೀ ರಾಮನ ಪತ್ನಿವ್ರತ ವಿರಹದ ಮನೆದಾಟ’ — ವಸ್ತು ನೋಡಿ. ರಾಮನ ಪಾದಸ್ಪರ್ಶ ವಾಗುವುದು ಅಹಲ್ಯಾ-ಗೌತಮರಿದ್ದಲ್ಲಿಗೆ ಮಾತ್ರ. ‘ಭಗವತ್ಪಾದಕೆ ಪರಿಣತಿ ಅದ್ಭುತವಿದ್ದಲ್ಲೇ’ ಈ ಸಾಲುಗಳು ರಾಮನ ಮನುಷ್ಯತ್ವ ದೈವತ್ವಗೊಂಡುದಕ್ಕೆ ಹಿನ್ನೆಲೆಯೊದಗಿಸುವಂತಿದೆ. ಹೀಗೆ ವಿಶಿಷ್ಟವಾದ, ಸೂಕ್ಷ್ಮವಾದ ಅರ್ಥವಂತಿಕೆಯನ್ನು ಪಡೆದಿರುವ ಕವಿತೆ, ಆಧುನಿಕ ಜೀವನದ ನೈಜ ಅನುಭವಗಳಿಂದ ಪುರಾಣವನ್ನು ಮಾನವೀಯಗೊಳಿಸುವಾಗ್ಗೆ ಶ್ರೇಷ್ಠತೆಯನ್ನು ಬಿಂಬಿಸುತ್ತದೆ.

o o o o o

ಸಮಾರೋಪ

ವಿವಿಧ ಜ್ಞಾನ ಶಾಖೆಗಳ ವಿಚಾರಗಳ ಹಿನ್ನೆಲೆಯಲ್ಲಿ ಪೌರಾಣಿಕತೆಯನ್ನು ಕುರಿತಂತೆ ಒಂದು ಅಧ್ಯಯನವನ್ನು ಇಲ್ಲಿ ಕೈಗೊಳ್ಳಲಾಗಿದೆ. ಪುರಾಣದ ಪರಿಕಲ್ಪನೆಯನ್ನು ಸೂಕ್ಷ್ಮವಾಗಿ ವಿವರಿಸಲು ಪ್ರಯತ್ನಿಸಲಾಗಿದೆ. ಭಾರತೀಯ ಮನಸ್ಸುಗಳು ಯಾಕಾಗಿ ಇತಿಹಾಸಕ್ಕಿಂತ, ಪುರಾಣ ಕಟ್ಟುವ ಕಡೆ ಒಲಿದವು ಎಂಬುದರ ಬಗೆಗೆ ಒಂದು ಒಳನೋಟವಿದೆ. ಮನಶಾಸ್ತ್ರದ ಹಿನ್ನೆಲೆಯಲ್ಲಿ ಪುರಾಣ ಕುರಿತ ವ್ಯಾಖ್ಯಾನಗಳು ಹೇಗೆ 'ಏಕಮುಖಿ'ಗಳಾಗಿವೆ. ಎಂಬುದನ್ನು ವರ್ಣಿಸಲಾಗಿದೆ. ಜನರ ಪ್ರಜ್ಞೆಯಲ್ಲಿ ಪುರಾಣ ಉಳಿಯುವುದಕ್ಕೆ ಇರಬಹುದಾದ ಕಾರಣಗಳನ್ನೂ ಊಹಿಸಲಾಗಿದೆ. ಸ್ತ್ರೀವಾದಿ ದೃಷ್ಟಿಕೋನದಲ್ಲಿ ಪುರಾಣಗಳು ಬಳಕೆಯಾಗುವ ಬಗೆಯನ್ನು ಕುರಿತು ತಿಳಿಸಲಾಗಿದೆ. ಪುರಾಣದ ಬಗ್ಗೆ ಕನ್ನಡ ಆಧುನಿಕ ಸಂಶೋಧಕರ, ವಿಮರ್ಶಕರ, ನಿಲುವುಗಳನ್ನು ಗಮನಿಸಲಾಗಿದೆ.

'ಪುರಾಣ ವೆಂಬುದು ಪುಂಡರಗೋಷ್ಠಿ' ಎಂಬ ದೃಷ್ಟಿಕೋನದ ಪುರಾಣವನ್ನು ಕುರಿತ ವಿರೋಧಿ ನೆಲೆಗಳು ಸಾಹಿತ್ಯದಲ್ಲಿ ಕಂಡುಬಂದರೂ ಪುರಾಣ ಪೂರ್ಣವಾದ ಅಲಕ್ಷಿತ ಸಾಹಿತ್ಯವಾಗಿಲ್ಲ. 'ಪೌರಾಣಿಕತೆ' ಯು ಇಂದಿಗೂ ಸೃಜನಶೀಲತೆಯ ಭಾಗವಾಗಿ, ಇಷ್ಟದೇವತಾ ವಿಗ್ರಹಕ್ಕೆ ಅನುಸಾರವಾಗಿ ಬದಿಸಿಕೊಂಡು ವಿವಿಧ ಆಯಾಮಗಳನ್ನು ಪಡೆಯುತ್ತದೆ. ವಿವಿಧ ಬರಹಗಾರರ ಲೇಖನಿಯಲ್ಲಿ ಪರಿಷ್ಕಾರಗೊಳ್ಳುತ್ತದೆ. ಪುರಾಣಗಳನ್ನು ಹೊಸ ಪ್ರಜ್ಞೆ, ಎಚ್ಚರವುಳ್ಳವರು ಭಂಜಿಸಿದರೂ, ಅಷ್ಟಕ್ಕೆ ಬಿಡದೆ ಪುನರನಿರ್ಮಾಣದ ಕಾರ್ಯವನ್ನು ಕೈಗೊಂಡು ಭಿನ್ನ ಭಿನ್ನ ವಿಚಾರಗಳನ್ನು, ದೃಷ್ಟಿಕೋನಗಳನ್ನು ಸ್ಥಾಪಿಸಬಯಸುತ್ತಾರೆ. ಆಧುನಿಕ ಕನ್ನಡ ಸಾಹಿತ್ಯದಾದ್ಯಂತ ಪೌರಾಣಿಕ ಆಶಯ, ಘಟನೆ, ಪಾತ್ರ, ವಸ್ತು, ಇತ್ಯಾದಿಗಳು ನೇರವಾಗಿಯೋ ಅಥವಾ ಅದನ್ನೇ ಹೋಲುವಂತೆಯೋ ಕಥೆ, ಕವನ, ನಾಟಕ, ಇತ್ಯಾದಿ ಹಲವು ಸಾಹಿತ್ಯ ಕೃತಿಗಳು ಅನೇಕ ಇವೆ.

ನನ್ನ ಅಧ್ಯಯನದಲ್ಲಿ ಆಯ್ದುಕೊಂಡ ಪೌರಾಣಿಕ ಸ್ತ್ರೀ ಪಾತ್ರಗಳು ಆಧುನಿಕ ಕನ್ನಡ ಕವಿತೆಗಳಲ್ಲಿ ಹೇಗೆ ಬಳಕೆಯಾಗಿವೆ ಎಂಬ ವಿಶ್ಲೇಷಣೆಯಲ್ಲಿ ಗಮನಿಸಲಾದ ಅಂಶಗಳು ಹಲವಾರಿವೆ. ಅಧ್ಯಯನಿಸಲಾದ ಪೌರಾಣಿಕ ಮಹಿಳಾ ಪಾತ್ರಗಳಲ್ಲಿ, ಸೀತೆ, ದ್ರೌಪದಿ , ಶಕುಂತಲೆ, ಕುಂತಿ, ಅಹಲ್ಯೆ ಈ ಐದೂ ಪಾತ್ರಗಳು ಪರಸ್ಪರ ಭಿನ್ನವಾದವು. ಸೀತೆ, ಅಹಲ್ಯೆಯರು ರಾಮಾಯಣದಲ್ಲಿನ ಪಾತ್ರಗಳು. ದ್ರೌಪದಿ, ಕುಂತಿಯರು ಮಹಾಭಾರತದವರು ಶಕುಂತಲೆಯ ಕಥೆ ಮಹಾಭಾರತದ ಉಪಾಖ್ಯಾನಗಳಲ್ಲಿ ಬರುವಂಥದು. ಇವರ ಬಗೆಗಿನ ವಿವರವಾದ ಕಥೆಗಳು ಏನೇ ಹೇಳಿದರೂ, ಕವಿತೆಗಳಲ್ಲಿ ನೆರೆಹಿಡಿಯಲಾಗಿರುವುದು ಅವರ ಬದುಕಿನ ಕೆಲವು ಮುಖ್ಯವೆನಿಸುವ ಘಟನೆಗಳನ್ನು ಮಾತ್ರ.

ಈ ಪಾತ್ರಗಳೆಲ್ಲ ಭಾರತೀಯ ಪರಂಪರೆಯಲ್ಲಿನ ಕೆಲವು ಸ್ತ್ರೀ ಮಾದರಿಗಳು. ಈ ಮಹಿಳೆಯರ ಜೀವನದಲ್ಲಿ ಘಟಿಸಿದ ಕೆಲವು ಘಟನೆಗಳನ್ನು ಆಧರಿಸಿ ಕವಿತೆಗಳು ನ್ಯಾಯ-ಅನ್ಯಾಯದ, ತಪ್ಪು-ಸರಿಗಳ ವಿವೇಚನೆಯನ್ನು ನಡೆಸುತ್ತವೆ. ಇನ್ನೂ ಕೆಲವು ಕವಿತೆಗಳು ಅದೇ ಘಟನೆಗಳನ್ನು ಪ್ರಸ್ತುತ ಸಾಮಾಜಿಕ ಸಂದರ್ಭಕ್ಕೆ ಸಮೀಕರಿಸಿ ಮೌಲ್ಯಗಳನ್ನು ಶೋಧಿಸುವ ಕಾರ್ಯದಲ್ಲಿ ತೊಡಗುತ್ತದೆ. ಪಾತ್ರಗಳನ್ನು ಕೇಂದ್ರವಾಗಿಟ್ಟುಕೊಂಡು, ಇಡೀ ಪರಂಪರೆಯನ್ನೇ ಪ್ರಶ್ನಿಸುವ ವಿಮರ್ಶಿಸುವವಂತೆ ದ್ರೌಪದಿ, ಕುಂತಿ, ಸೀತೆಯ ಪಾತ್ರಗಳು ಬಳಕೆಗೊಂಡಿವೆ. ಅದೇ ಕಾಲಕ್ಕೆ ಬದುಕಿನ ಕೊನೆಯ ಗೆರೆಯಲ್ಲಿ ನಿಂತು ತಮ್ಮನ್ನು ತಾವೇ ಅವಲೋಕಿಸಿಕೊಳ್ಳುವ ರೀತಿಯೂ ವಿಶಿಷ್ಟವಾಗಿದೆ.

ಸೀತೆಯ ಸಹಿಷ್ಣತೆ ಬಗ್ಗೆ ಕನಿಕರವಿದೆ; ಮೆಚ್ಚುಗೆಯಿದೆ. ದ್ರೌಪದಿಯ ಜೀವನ ಹೋರಾಟದ ವೈಫಲ್ಯತೆಯ ಬಗ್ಗೆ ಒತ್ತಿದೆ. ಶಕುಂತಲೆಯು ವಿಶ್ವಾಸಘಾತಗಳಿಂದ ನೊಂದರೂ, ಹೂತುಹೋಗದೆ ಪ್ರಾಥೆಯನ್ನಾಗಿ ಬೆಳೆಸುವ ವಿಶಿಷ್ಟ ಚಿತ್ರಣವಿದೆ. ಕೂಸುತೂಗದೆ ತಾಯಾದ, ಜವಾಬ್ದಾರಿ ವಿಮುಖಳಾದ ಕುಂತಿಯು ಹೃದಯಾಂತರಾಳದಿಂದ ತೆರೆದಿಡುವ ಭಾವನೆಗಳು, ಮಾತುಗಳು ವಿಶಿಷ್ಟವಾಗಿದೆ. ಅಹಲ್ಯೆಯ ಕಥೆ ಪೂರ್ಣವಾಗಿ ಮಾನವೀಕರಣಗೊಂಡರೂ 'ತಪ್ಪಿತಸ್ಥಳ' ನ್ನಾಗಿಯೇ ಉಳಿಸಿ, ಅದಕ್ಕೆ ಕಾರಣಗಳನ್ನು ಪರ–ವಿರೋಧವಾಗಿ ನೀಡುವ ಕವಿತೆಗಳಿಗಿಂತ ಭಿನ್ನವಾಗಿ ಬೇಂದ್ರೆಯವರು ಅಹಲ್ಯೆಯನ್ನು ನಿರಪರಾಧಿಯಾಗಿಸಿ, ಭಾವನೆಗಳು ಪರಿಪಾಕಗೊಳ್ಳುವೆಡೆಗೆ ತುಡಿದಿದ್ದಾರೆ.

ಹೀಗೆ ಪ್ರಾಚೀನ ಪೌರಾಣಿಕ ಸ್ತ್ರೀ ಪಾತ್ರಗಳು ಮಾದರಿಗಳಾಗಿ ಉಳಿಯದೆ, ಆಧುನಿಕ ಕಾಲದ ಮಹಿಳೆಯ ಬದಲಾದ ವಿಚಾರ ಭಾವನೆಗಳ ಮಾರ್ಪಾಡಿಗೆ ತಕ್ಕಂತೆ ಮಾರ್ಪಡಿಸಿಕೊಳ್ಳುತ್ತಾ ಹೋಗುತ್ತದೆ. ಒಟ್ಟಾರೆ ಭಿನ್ನ ಭಿನ್ನವಾದ ದೃಷ್ಟಿಕೋನದಿಂದ, ಸಾಮಾಜಿಕ ಸವಾಲುಗಳಿಗೆ ಉತ್ತರದಂತೆ, ಜೀವನ ಮೌಲ್ಯಗಳ ಶೋಧನೆಗೆ, ಜೀವನಾನುಭವದ ಅಭಿವ್ಯಕ್ತಿಗೆ ಇಂಬುಕೊಡುವಂತೆ ಪಾತ್ರಗಳನ್ನು ಆಧುನಿಕ ಕನ್ನಡದ ಕವಿಗಳು ಬಳಸಿಕೊಂಡಿದ್ದಾರೆ.

o o o o o o o

ಆಕರ ಗ್ರಂಥಸೂಚಿ

1) ಕನ್ನಡ ಸಾಹಿತ್ಯದಲ್ಲಿ ಚರಿತ್ರೆ, ಮತ್ತು, ಪುರಾಣ — ವಿವಿಧ ಲೇಖಕರು
ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು,
ಮೊದಲ ಮುದ್ರಣ 1993.

2) ಸಾಹಿತ್ಯ ಮತ್ತು, ಪುರಾಣ — ಮಲ್ಲೇಪುರಂ ಜಿ. ವೆಂಕಟೇಶ
ಕರ್ನಾಟಕ ಸಾಹಿತ್ಯ, ಅಕಾಡೆಮಿ, ನೃಪತುಂಗ ರಸ್ತೆ,
ಬೆಂಗಳೂರು, ಮೊದಲ ಮುದ್ರಣ 1993.

3) ಸಾಧನೆ — ಬೆಂಗಳೂರು ವಿಶ್ವವಿದ್ಯಾಲಯದ ತ್ರೈಮಾಸಿಕ
ಸಂಚಿಕೆ — 4, ಸಂಪುಟ 14, ಅಕ್ಟೋಬರ್ — ಡಿಸೆಂಬರ್ 1985.
ಲೇಖನ: ಅರ್ಥೈಸುವಿಕೆಯ ವಿರುದ್ಧ — ಸೂಸಾನ್ ಸೊಂಟಾಗ್
ಅನುವಾದ : ಎಚ್. ಎಸ್. ಶ್ರೀಮತಿ

4) ಪುರಾಣ — ಬಿ. ಎಲ್. ನಾಗಭೂಷಣ ಸ್ವಾಮಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಎರಡನೇ ಮುದ್ರಣ 1993.

5) ಸಾಹಿತ್ಯ ಸಂವಾದ — ಡಾ. ಕೆ. ಎಲ್. ಗೋಪಾಲ ಕೃಷ್ಣಯ್ಯ
ಪ್ರಕಟಣೆ— ವಿಶ್ರಾಂತ ಪ್ರಕಾಶನ, ಬೆಂಗಳೂರು, ಮೊದಲ ಮುದ್ರಣ 1993.

6) ಕನ್ನಡ ಸಾಹಿತ್ಯದಲ್ಲಿ ಪುರಾಣ ಪ್ರಜ್ಞೆ — ಕೆ. ಎಲ್. ಗೋಪಾಲಕೃಷ್ಣಯ್ಯ
ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ಮೊದಲ ಮುದ್ರಣ 1987.

7) ಮರದೊಳಗಣ ಕಿಚ್ಚು— ಡಾ. ರಹಮತ್ ತರೀಕೆರೆ
(ಪ್ರತಿ ಸಂಸ್ಕೃತಿ ಕೆಲವು ಸಾಹಿತ್ಯಿಕ ಅಧ್ಯಯನಗಳು)
ಕನ್ನಡ ವಿಶ್ವವಿದ್ಯಾಲಯ, ಹಂಪಿ, ಮೊದಲ ಮುದ್ರಣ 1996.

8) ಮಹಿಳೆ ಸಾಹಿತ್ಯ ಸಮಾಜ — ವಿಜಯಾ ದಬ್ಬೆ
ರಚನಾ ಪ್ರಕಾಶನ ಮೈಸೂರು, ಮೊದಲ ಮುದ್ರಣ 1989

9) ಕನ್ನಡ ಮಹಾಕಾವ್ಯಗಳಲ್ಲಿ ಸೀತೆಯ ಪಾತ್ರ — ಡಾ: ಮಂದಾಕಿನಿ ಭೀಮ ಸೇನರಾವ್ ತವಗ.
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ಮೊದಲ ಮುದ್ರಣ 1995.

10) ಯುಗಾಂತ — ಇರಾವತಿ ಕರ್ವೆ,
ಅನುವಾದ: ಸರಸ್ವತಿ ಗಜಾನನ ರಿಸಬೂಡ
ಸಾಹಿತ್ಯ ಅಕಾಡೆಮಿ ಪ್ರಕಟಣೆ, ದೆಹಲಿ, ಮೊದಲ ಮುದ್ರಣ 1973.

11) ಗರತಿಯ ಹಾಡು – ಹಲಸಂಗಿ ಸಹೋದರರು,
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ,
ಬೆಂಗಳೂರು, 1990.

12) ಇದೇ ರಾಮಾಯಣ – ಬಂಜಗೆರೆ ಜಯಪ್ರಕಾಶ
ಬೆಳ್ಳಿಚುಕ್ಕಿ ಬುಕ್‌ಟ್ರಸ್ಟ್, 1994.

13) ಅವಲೋಕನ – ಸಂ. ಶ್ರೀಕೃಷ್ಣ ಆಲನಹಳ್ಳಿ,
ಜ್ಞಾನಪೀಠ ಪ್ರಶಸ್ತಿಯ ಉಲ್ಲೇಖ, 1989.

14) ಸುಳ್ಳಿನಾಚೆಯ ಸತ್ಯ – ಭಾಗ್ಯ,
ನೆಲಮನೆ ಪ್ರಕಾಶನ, ಮೈಸೂರು 1982.

15) ನಾನೇಕೆ ಬರೆಯುತ್ತೇನೆ – ಎಸ್.ಎಲ್. ಭೈರಪ್ಪ,
ಸಾಹಿತ್ಯ ಭಂಡಾರ, ಬೆಂಗಳೂರು, 1980.

16) ಪರ್ವ – ಎಸ್.ಎಲ್. ಭೈರಪ್ಪ,
ಸಾಹಿತ್ಯ ಭಂಡಾರ, ಬೆಂಗಳೂರು, 1979.

17) ವ್ಯಕ್ತಿಮುಕ್ತಿ ಸೃಜನಶೀಲತೆ - ಬರಗೂರು ರಾಮಚಂದ್ರಪ್ಪ,
ಸುನಾಡ ಪ್ರಕಾಶನ, ಬೆಂಗಳೂರು, 1989.

ಆಯ್ದ ಕವಿತೆಗಳ ಗ್ರಂಥಸೂಚಿ

(ಕವಿಗಳ ಅಕಾರಾದಿಯಾಗಿ)

1) ಎಂ.ಆರ್. ಕಮಲ — 'ಶಕುಂತಲೋಪಾಖ್ಯಾನ'
ಶಕುಂತಲೋಪಾಖ್ಯಾನ, 1988,
ಕಲ್ಯಾಣ ಪ್ರಕಾಶನ, ಬೆಂಗಳೂರು.

2) ಕೆ.ಎಸ್. ನರಸಿಂಹಸ್ವಾಮಿ — 'ಸೀತೆಯ ಭಾಗ್ಯ'
(ಇರುವಂತಿಗೆ) ಮಲ್ಲಿಗೆಯ ಮಾಲೆ, 1986,
ಅಪಿ ಪ್ರಕಾಶನ, ಬೆಂಗಳೂರು.

3) ಚಂಪಾ — 'ಸೀತಾಯಣ'
ಕಾಲ್ರಲಾ ನನ್ನ ಕಾಲ್ರಲಾ, 1994.
ಸಂಕ್ರಮಣ ಪ್ರಕಾಶನ, ಧಾರವಾಡ.

4) ಜಿ.ಎಸ್. ಶಿವರುದ್ರಪ್ಪ — 'ಶಾಕುಂತಲದ ಐದನೆಯ ಅಂಕ'
(ಕಾರ್ತೀಕ) ಸಮಗ್ರಕಾವ್ಯ, 1987,
ಸ್ನೇಹ ಪ್ರಕಾಶನ, ಬೆಂಗಳೂರು.

5) ಧರಣಿ ಮಾಲಗತ್ತಿ — 'ದುಷ್ಯಂತೋಪಾಖ್ಯಾನ'
ಬೃಹಜ್ಜಾಮ, 1995,
ಶಿಲಾಪ್ರಕಾಶನ, ಮುದ್ದೇಬಿಹಾಳ.

ಧರಣೀದೇವಿ ಕೆ. — 'ಯುಗದ ತೆರೆಯ ಹಿಂದೆ'
ಸಣ್ಣಕಥೆ, ತರಂಗ — ವಾರಪತ್ರಿಕೆ,
12 ಏಪ್ರಿಲ್, 1992.

6) ಪ್ರತಿಭಾನಂದಕುಮಾರ — 'ನತ್ತು'
ಈತನಕ, 1988,
ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು.

7) ಪು.ತಿ.ನ — 'ಅಹಲ್ಯೆ'
ನಾಟಕ, 1941,
ಕಾವ್ಯಾಲಯ ಪ್ರಕಾಶನ, ಮೈಸೂರು.

8) ಭಾರತೀ ಪಾಟೀಲ — 'ದ್ರೌಪದೀ'
ಅಕ್ಕಕೇಳವ್ವ, 1994
ನೆಲೆಪ್ರಕಾಶನ, ಸಿಂದಗಿ.

9) ಬೇಂದ್ರೆ — 'ಅಹಲ್ಯೆ'
ಒಲವೆ ನಮ್ಮ ಬದುಕು, 1977
ಗೀತಾ ಬುಕ್ ಹೌಸ್, ಮೈಸೂರು.

10) ಬಿ.ಟಿ. ಲಲಿತಾನಾಯಕ — 'ಇದೇ ಕೂಗು ಮತ್ತೆ ಮತ್ತೆ'
ಬಂಡಾಯಕಾವ್ಯ, ಸಂ. ಬರಗೂರು ರಾಮಚಂದ್ರಪ್ಪ, 1990
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು,

11) ಮಾಸ್ತಿ ವೆಂಕಟೇಶ ಐಯ್ಯಂಗಾರ — 'ನಿತ್ಯಳಾದ ಅಹಲ್ಯೆ'
ಮಲಾರ, 1933
ಜೀವನ ಕಾರ್ಯಾಲಯ, ಬೆಂಗಳೂರು.

12) ವಿಜಯಾ ಗುತ್ತಲ — 'ದ್ರೌಪದಿ ಮತ್ತೆ ನಕ್ಕಳೆ'
ಸಂಕ್ರಮಣ, ಸಾಹಿತ್ಯ ಮಾಸಿಕ,
ಸಂಚಿಕೆ 228, 1991.

13) ವಿಜಯಾ ದಬ್ಬೆ — 'ಪರಂಪರೆ' 'ಕುಂತಿಯಮಗಳು'
'ತಿರುಗಿನಿಂತ ಪ್ರಶ್ನೆ'
ಇತಿಗೀತಿಕೆ, 1995,
ರಚನಾ ಪ್ರಕಾಶನ, ಮೈಸೂರು.

14) ವೈದೇಹಿ — 'ಸೀತೆಯಕಥೆ'
ಬಿಂದು ಬಿಂದಿಗೆ 1990,
ಅಕ್ಷರ ಪ್ರಕಾಶನ, ಹೆಗ್ಗೋಡು.

— 'ದ್ರೌಪದಿಯೊಂದಿಗೆ ಕಳೆದ ಅಪರಾಹ್ನ'
ಸಣ್ಣಕಥೆ, ಗೋಲ, 1986,
ಅಕ್ಷರ ಪ್ರಕಾಶನ, ಸಾಗರ.

15) ಸುಧಾ ಶರ್ಮ ಚವತ್ತಿ — 'ದ್ರೌಪದಿ'
ಒಡೆದ ಕಣ್ಣುಗಳ ಪ್ರೀತಿ, 1993,
ಕನ್ನಡ ಸಂಘ, ಕ್ರೈಸ್ಟ್ ಕಾಲೇಜ,
ಬೆಂಗಳೂರು.

16) ಸರಸ್ವತಿಗೌಡ — 'ಕುಂತಿ'
ಬಂಡಾಯ ಕಾವ್ಯ, 1990,
ಸಂ. ಬರಗೂರು ರಾಮಚಂದ್ರಪ್ಪ.
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು